ಅಪರಂಜಿ

ಫೆಬ್ರವರಿ 2003

ತಿಳಿನಗೆಯ ಕಾರಂಜಿ



ಪ್ರಕಾಶ್

ಶ್ಯಾಮಲಾ ರವಿಶಂಕರ್

ಭಕ್ತ

ನಾಗೂಶ್ರೀ ಸೂರಿ

ಎಸ್ಸಾರ್ ಮೂರ್ತಿ

ಇಸ್ಮೆಯಿಲ್

ಬಿ.ಆರ್. ನಾಗೇಶ್

ಕುಮುದಾ ಪುರುಷೋತ್ತಮ್

ಇಂದಿರಾಮೂರ್ತಿ

ವೈ. ನಾರಾಯಣ ಶರ್ಮ

ಡಿ ಪ್ರತಿ: ರೂ. 5.00

ಸ್ಥಾಪನೆ : 1990

ವಾಸವಿ ಕ್ರೆಡಿಟ್
ಕೋ-ಆಪರೇಟಿವ್ ಸೊಸೈಟಿ ನಿಯಮಿತ

ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣ, 8ನೇ ಕ್ರಾಸ್
ಮಲ್ಲೇಶ್ವರಂ, ಬೆಂಗಳೂರು-560 003. ದೂರವಾಣಿ : 3447014
ಶಾಖೆ : ನಂ 4, ಸಂಜಯನಗರ ಮುಖ್ಯ ರಸ್ತೆ, ಎನ್.ಜಿ.ಇ.ಎಫ್. ಬಡಾವಣೆ
ಬೆಂಗಳೂರು-560 094. ದೂರವಾಣಿ : 3419780

ಬೆಂಗಳೂರು ನಗರದಲ್ಲಿ ತ್ವರಿತಗತಿಯಲ್ಲಿ ಬೆಳೆಯುತ್ತಿರುವ ಸಹಕಾರಿ ಸಂಸ್ಥೆ

ನಿಮ್ಮ ಶುಭೋದಯಕ್ಕೆ - ನಮ್ಮ ಯೋಜನೆಗಳು

ಭಾಗೀರಥಿ

ಗೌರಿಹಬ್ಬ, ಗರುಡ ಪಂಚಮಿ, ಯುಗಾದಿ ಹಬ್ಬದ ಸಂದರ್ಭದಲ್ಲಿ ನಿಮ್ಮ ಹೆಣ್ಣು ಮಕ್ಕಳಿಗೆ ನಿಮ್ಮ ಪರವಾಗಿ ಮಂಗಳದ್ರವ್ಯಗಳಾಗಿ ಆಜೀವ ಪರ್ಯಂತ ಹಣವನ್ನು ಕಳುಹಿಸಿ ಕೊಡುವ ಯೋಜನೆ.

ನೀವು ವಿನಿಯೋಗಿಸಬೇಕಾದ ಕನಿಷ್ಠ ಮೊತ್ತ ರೂ 600-00 ಮಾತ್ರ.

ಜ್ಞಾನ ಜ್ಯೋತಿ ಠೇವಣಿ

ಇಂದು ನೀವು ತೊಡಗಿಸುವ
8,000 ರೂಪಾಯಿಗಳು
20 ವರ್ಷಗಳಲ್ಲಿ **1,35,000**
ರೂಪಾಯಿಗಳಾಗಿರುತ್ತದೆ.

ನಗದು ಪತ್ರ

ಕೇವಲ 5 ವರ್ಷಗಳಲ್ಲಿ ನಿಮ್ಮ ಹಣ ದ್ವಿಗುಣಗೊಳ್ಳುತ್ತದೆ.

ನಿಮ್ಮ ನಿಶ್ಚಿತ ಠೇವಣಿಗಳ ಮೇಲೆ ಶೇ 15ರಷ್ಟು ಆದಾಯ.

ನಿಮ್ಮ ಕಷ್ಟಾರ್ಜಿತ ಹಣ ನಮ್ಮಲ್ಲಿ ತೊಡಗಿಸಿ, ನಿಶ್ಚಿಂತೆಯ ಜೀವನ ಸಾಗಿಸಿ.

ಹೆಚ್ಚಿನ ವಿವರಗಳಿಗೆ ಕಛೇರಿಯಲ್ಲಿ ಸಂಪರ್ಕಿಸಿ.

ರಾ.ಪ. ರವಿಶಂಕರ್	**ಎ.ಆರ್. ಅರುಣ್ ಕುಮಾರ್**	**ಎನ್. ಪಾರ್ವತಿ**
ಅಧ್ಯಕ್ಷರು	**ಉಪಾಧ್ಯಕ್ಷರು**	**ಕಾರ್ಯದರ್ಶಿ**

ನಿರ್ದೇಶಕರುಗಳು

ಬಿ.ಎಸ್. ಗೋಪಿನಾಥ್ ■ ಡಾ॥ ಪಿ. ಎನ್. ಗೋವಿಂದರಾಜುಲು ■ ವೈ. ವಿ. ಶಾಂತಮೂರ್ತಿ
ಕೆ.ವಿ. ಸುರೇಶ್ ಕುಮಾರ್ ■ ಸಿ. ಎನ್. ನಾಗೇಶ್ವರ ರಾವ್ ■ ಬಿ. ಕೃಷ್ಣಮೂರ್ತಿ
ಎಸ್. ಸತೀಶ್ ■ ಶ್ರೀಮತಿ ಕೆ. ಎಂ. ವಿಶಾಲಾಕ್ಷಿ ■ ಹೆಚ್. ಬಿ. ಪ್ರಸಾದ್ ■ ವಿ.ಎ. ಅಶ್ವಥ್



ಗೌರವ ಸಲಹೆಗಾರರು:	ಚಂದಾ ವಿವರ:	
ಶ್ರೀ ಅ. ರಾ. ಸೇ.	ಬಿಡಿ ಪ್ರತಿ:	ರೂ. 5.00
ಶ್ರೀ ಶೇಷಗಿರಿ		
ಸಂಪಾದಕ:	ವಾರ್ಷಿಕ ಚಂದಾ:	ರೂ. 60
ಶಿವಕುಮಾರ್	ಹತ್ತು ವರ್ಷದ ಚಂದಾ :	ರೂ. 500
ನಿರ್ವಹಣೆ:	Ph: 3345259	
ಬೇಲೂರು ರಾಮಮೂರ್ತಿ	email: aparanji@hotmail.com	
ಕೃಷ್ಣ ಸುಬ್ಬರಾವ್	website: aparanjimag.com	

ವಿಳಾಸ : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು- 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 20 ಫೆಬ್ರವರಿ - 2003 ಸಂಚಿಕೆ -5

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



○ ಪ್ರಕಾಶ್

ತಂಬಾಕು; ದಂಡವಿಲ್ಲದೇ ಖರೀದಿಗೆ ಕೇಂದ್ರ ಒಪ್ಪಿಗೆ
- ಸುದ್ದಿ

ದಂಡ ತೆರೆಯುವವರು ಗ್ರಾಹಕರು !!

★★★

ಪ್ರತಿಷ್ಠಿತ ಹೋಟಲ್‌ಗಳಲ್ಲಿ ಕಳ್ಳತನ; ಆತಂಕ
- ಪತ್ರಿಕೆ

ಅಲ್ಲಿಯ ರೇಟುಗಳನ್ನು ನೋಡಿ ನಮಗೂ ಆತಂಕ !!

★★★

ಜಾನ್ ರೈಟ್ ನ್ಯೂಜಿಲೆಂಡ್ ಟೀಮಿನ ಕೋಚ್ ಆಗುತ್ತಾರಂತೆ !!
- ಕ್ರೀಡಾ ಸುದ್ದಿ

ಇದು ತೀರಾ ರಾಂಗ್ !!

★★★

ಷರೀಫ್ ಕಿರಿಕಿರಿ; ಸೋನಿಯಾಗೆ ಕೃಷ್ಣ ದೂರು
- ಸುದ್ದಿ

ಹೌದು, ಅವರು ಕಿರಿ! ಕಿರಿ!

★★★

ಪತ್ರಕರ್ತನ ಮನೆ ದರೋಡೆ ಯತ್ನ
- ಸುದ್ದಿ

ಪತ್ರಕರ್ತರೆಲ್ಲ ವಿಷಣ್ಣ ನಗೆ ನಕ್ಕರಂತೆ !!

★★★

ಮೈಸೂರಿನ ರೆಸಾರ್ಟ್ ಪ್ರಕರಣ, ಬೆಂಗಳೂರಿನಲ್ಲಿ ವಿಚಾರಣೆ

- ಪತ್ರಿಕೆ

ಆ ರೆಸಾರ್ಟ್ ಈಗ ಬಹು ಪಾಪ್ಯುಲರ್ ಆಗಿದೆಯಂತೆ !!

★★★

ಠಾಣೆ ಡೈರಿ ಪ್ರಕರಣ; ಖರ್ಗೆ ಮೌನ

- ಸುದ್ದಿ

ಮೌನೇನ ಕಲಹಂ ನಾಸ್ತಿ !!

★★★

ಅಖಿಲ ಭಾರತೀಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಅಧಿವೇಶನ

- ಸುದ್ದಿ

ಜನಿಸಲಿರುವ ಶಿಶುಗಳು ದೇಶಾದ್ಯಂತ ನಡುಗಿದವಂತೆ !!

★★★


ಮೂಲಭೂತ ಶಿಕ್ಷಣಕ್ಕೆ ಆದ್ಯತೆ ನೀಡಬೇಕು

- ನಾರಾಯಣಮೂರ್ತಿ

ಆ ಭೂತ ಇನ್ನೂ ಯಾರಿಗೂ ಸಿಕ್ಕಿಲ್ಲ !!

★★★

"ಈ ಹೊಸಾ ಸಾಫ್ಟ್‌ವೇರ್‌ಗೆ ಹೊಂದಿಕೊಳ್ಳೇಕಾದ್ರೆ ನನ್ ಮೆದ್ಳನ್ನೇ upgrade ಮಾಡ್ಕೊಬೇಕಂತೆ..."



ಸೀರೆಯ ಪ್ರಭಾವ

• ಶ್ಯಾಮಲಾ ರವಿಶಂಕರ್

ಇತ್ತೀಚೆಗೆ ನಮ್ಮ ದೇಶದಲ್ಲಿ ಸೀರೆಯನ್ನುಡುವವರೇ ಅಪರೂಪವೆಂದು ಹೇಳಬೇಕಾದ್ದೇನೂ ಇಲ್ಲ! ನಾನೇನೂ ಬೇರೆ ಬೇರೆ ರೀತಿಯ (ಗೌರವವಾದ) ಉಡುಪುಗಳನ್ನು ಮನಃಪೂರ್ವಕವಾಗಿ ಮೆಚ್ಚಿದರೂ, ಸೀರೆಯನ್ನೇ ಉಡುವುದು more out of habit rather than anything else. ನೂತನ ಬದಲಾವಣೆ ಮೈಗೂಡಿಸಲೂ ಕೂಡ ಸೋಮಾರಿ, ಅಷ್ಟೆ.

ಇದೇ ನಿಲುವಿನಲ್ಲಿ ಅಮೆರಿಕಾದಲ್ಲಿ ಎಲ್ಲೆಲ್ಲಿಗೆ ಹೋದರೂ ಸೀರೆಯನ್ನೇ ಉಟ್ಟೆ. ನನ್ನ ಮಗಳು "ನಿನ್ನ ಮಡಿವಂತಿಕೆನ ಬಿಟ್ಟು ಚೂಡಿದಾರೋ ಅಥವಾ ಪ್ಯಾಂಟೋ ಹಾಕ್ಕೋಬಾರ್ದಾ" ಅಂದರೂ ನಾನು ಕೇಳಲಿಲ್ಲ. ನನ್ನ ಸ್ನೇಹಿತೆಯರು "ಹೋಗಲಿ ನನ್ನ dress ಆದ್ರೂ ಹಾಕ್ಕೊಳ್ಳೇ. ಎಷ್ಟೂಂತ ತಿರ್ಗ್ತೀಯಾ, ಈ ಸೀರೆಗಳನ್ನ ಹೊತ್ಕೊಂಡು?" ಅಂದ್ರೂ ನಾನು ಪ್ರಭಾವಿತಳಾಗಲಿಲ್ಲ.

ಒಳಗೆಲ್ಲೋ ನನ್ನನ್ನ ಯಾರಾದರೂ ಗುರುತಿಸಬುದೇನೋ ಅನ್ನೋ ಭಾವನೆ! (ನಾನೇನು ಇಂದಿರಾ ಗಾಂಧೀನಾ ಎಲ್ಲಂದ್ರಲ್ಲಿ ಯಾರಂದ್ರೆ ಅವರು ಗುರ್ತಿಸೋಕೆ?) ಅಂತೂ, ಯಾಕೆ ಹೀಗೇಂತ ಹೇಳೋಕೆ ಬರ್‍ತಾ ಇಲ್ಲ, ಬಿಡಿ. ಒಳ್ಳೆಯದು, ಇಲ್ಲದಿದ್ರೆ ಈ ಬರಹ ಬರಿತಿದ್ನಾ?

ಮಿನಿಯಾಪೊಲಿಸ್‌ನಲ್ಲಿ ಆಗಸ್ಟ್‌ನಲ್ಲಿ Aquatenmial ಎಂಬ ಹತ್ತು ದಿನಗಳ ಕ್ರೀಡಾ - ಸಾಂಸ್ಕೃತಿಕ ಉತ್ಸವ ನಡೆಯುತ್ತದೆ. ಅದರಲ್ಲೊಂದು ಶನಿವಾರ ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 2 ಘಂಟೆಯವರೆಗೆ ಡೌನ್‌ಟೌನ್‌ನಲ್ಲಿ ಮೆರವಣಿಗೆ ಬರುತ್ತದೆ ಎನ್ನುವ ಸುದ್ದಿ ಪೇಪರ್‌ನಲ್ಲಿ ನೋಡಿ ಅದನ್ನು ನನಗೆ ತೋರಿಸಲು ನನ್ನ ಅಳಿಯ ಉತ್ಸುಕರಾಗಿ ನನ್ನನ್ನು ಹೊರಡಿಸಿದರು. ಇದರಲ್ಲಿ ಡ್ರಿಲ್ ಮತ್ತು ಪೆರೇಡ್‌ಗಳು, ಅಕ್ಕಪಕ್ಕದ ಸಬರ್ಬ್‌ಗಳಲ್ಲಿ ಸೌಂದರ್ಯ ಸ್ಪರ್ಧೆಗಳಲ್ಲಿ ವಿಜೇತರಿಂದ ರೂಪರಾಣಿಯರೂ, ಮಕ್ಕಳನ್ನು ನಗಿಸಲು ವಿಧವಿಧವಾದ ಬಫೂನ್‌ಗಳೂ ಇನ್ನೂ ಏನೇನೋ ಒಂದರ ಹಿಂದೆ ಒಂದಂತೆ ತಾಳ - ಮೇಳ ಗಳೊಡನೆ ಬಂದು ಹೋಗುತ್ತವೆ. ಅದನ್ನು ನೋಡಲು ಜನ ರಸ್ತೆಯ ಎರಡೂ ಪಕ್ಕಗಳಲ್ಲಿ ನಿಂತು, ಕೂತು, ಮಲಗಿ ಕಾಯುತ್ತಿರುತ್ತಾರೆ. ನಾವು Sky way ನಲ್ಲಿ ನಿಂತು ಕೆಳಗೆ ನಡೆಯುತ್ತಿರುವುದನ್ನು ವೀಕ್ಷಿಸುತ್ತಿದ್ದೆವು. ಅಲ್ಲೊಬ್ಬ ಪೊಲೀಸ್ ಅಧಿಕಾರಿಗೆ (black lady) ನನ್ನನ್ನೇ ನೋಡುತ್ತಿದ್ದು ನಂತರ ನನ್ನ

ಹತ್ತಿರ ಬಂದು, 'ನಿನ್ನ ಡ್ರೆಸ್ ತುಂಬಾ ಚೆನ್ನಾಗಿದೆ, ಎಲ್ಲಿ ಕೊಂಡೆ' ಎಂದು ವಿಚಾರಿಸಿದಳು. ಜೊತೆಗೆ ಅದನ್ನು ಹೇಗೆ ಧರಿಸಿರುವೆ? ಕಾಲಿನ ಕಡೆಯಿಂದಲೋ ಅಥವಾ ತಲೆಯ ಕಡೆಯಿಂದಲೊ?' ಅಂತಲೂ ಸೇರಿಸಿದಳು.

ವರ್ಷಾನುಗಟ್ಟಲೆಗಳಿಂದ ಸೀರೆ ಉಟ್ಟವಳಿಗೆ ಉತ್ತರ ಹೊಳೆಯಲೇ ಇಲ್ಲ. ''ನಾನು ನಿನ್ನ ಡ್ರೆಸ್ಸನ್ನು ಮುಟ್ಟಬಹುದಾ? I that want to fill he texthre" ಅಂದಳು ವಿನಯದಿಂದ.

ಅಷ್ಟರಲ್ಲಿ ಚೇತರಿಸಿಕೊಂಡು, ''ಇದು ಭಾರತೀಯ ನಾರಿಯರ ಉಡುಪು, ಬಹಳ ಉದ್ದಕ್ಕಿರುತ್ತದೆ. ನಮ್ಮ ಸುತ್ತ ಸುತ್ತಿಕೊಳ್ಳುತ್ತೇವೆ. ಇದಕ್ಕೆ ಹೊಲಿಗೆಗಳಿಲ್ಲದ ಕಾರಣ ಅಂಗಿಯ ಹಾಗೆ ಹಾಕಿಕೊಳ್ಳಲು ಆಗದು'' ಎಂದೆ. ಹಾಗಾದರೆ ಅದು ಹೇಗೆ ನಿಂತಿದೆ? ನನಗೆ ತೋರಿಸುವಿಯಾ? ಎಂದು ಮುಟ್ಟಿ ಮುಟ್ಟಿ ನನ್ನ ನೆರಿಗೆಗಳನ್ನು ಪರೀಕ್ಷಿಸಿದಳು.

ಇದೇನು ಗ್ರಹಚಾರ? ನಾನು ಇದೇ ಇಲ್ಲಿ ಇವಳಿಗೆ ಸೀರೆ ಉಡುವುದನ್ನು demonstrate ಮಾಡುತ್ತಿದ್ದರೆ ಕೆಳಗಿರುವವರು ಮೆರವಣಿಗೆ ಮರೆತು ತಲೆ ಎತ್ತುತ್ತಾರೆ Aquatennial ವರ್ತ್ತಾರರಿಗೆ, ಛಾಯಾ ಗ್ರಾಹಕರಿಗೆ ಅದಕ್ಕಿಂದ ಸ್ವಾರಸ್ಯಕರ ಸುದ್ದಿ ಪ್ರಕಟಿಸಲು ಸುಗ್ಗಿಯಂತೂ ಸರಿ, ಎಂತೆಲ್ಲಾ ವಿಷಯಗಳು ಕ್ಷಣಾರ್ಧದಲ್ಲಿ ನನ್ನ ಮನಸ್ಸಿನಲ್ಲಿ ಹಾದು ಹೋಗುತ್ತಿತ್ತು. ಹೇಗೆ ಕಳಚಿಕೊಳ್ಳೋದು? ಅನ್ನುವಷ್ಟರಲ್ಲಿ ನನ್ನ ಅಳಿಯ, ''ನಿನಗೆ ಅಷ್ಟೊಂದು ಇಷ್ಟವಾಯಿತೇ ಈ ಉಡುಪು? ಇಂಡಿಯಾ ಸ್ಟೋರಿಗೆ ಹೋಗು, ಅಲ್ಲಿ ಸಿಗುತ್ತದೆ. ಮೆಚ್ಚುಗೆ ವ್ಯಕ್ತಪಡಿಸಿದ್ದಾಕ್ಕಾಗಿ ಧನ್ಯವಾದಗಳು'' ಎಂದು ನನ್ನನ್ನು ಅವಳಿಂದ ಬೇರ್ಪಡಿಸಿದರು.

'Mystic lake' ಎಂಬ ಕ್ಯಾಸಿನೋಗೆ ಹೋಗಿ ಒಂದಷ್ಟು gamble ಮಾಡಿದ್ದಕ್ಕೆ ಹಣ ಸಾಕಷ್ಟು ಗೆದ್ದೆ. ಅದು ನನ್ನ ಹಣವಲ್ಲವಲ್ಲ, ಅದು ಪೂರ್ತಿ ಕಳೆದುಬಿಡೋಣ ಎಂದು ಪುನಃ gambleನಲ್ಲಿ ತೊಡಗಿದೆ. (ಪುಣ್ಯಕ್ಕೆ ಈ ಸರ್ತಿ ಸೋತಿದ್ದು ನನ್ನ ಅದೃಷ್ಟ! ಇಲ್ಲದಿದ್ದರೆ ಈ cycle ಎಷ್ಟು ಬರಿ ಪುನರಾವರ್ತನೆ ಯಾಗಬೇಕಿತ್ತೋ?) ಹೊರಬಿದ್ದಾಗ ರಾತ್ರಿ 2 ಘಂಟೆ. ವ್ಯಾಲೆ ಪಾರ್ಕಿಂಗ್‌ನಿಂದ ಕಾರು ಬರಲೆಂದು ಕಾದಿದ್ದಾಗ ಅಲ್ಲೇ ಇದ್ದ ಇಬ್ಬರು ವೃದ್ಧೆಯರು (ಮೂರನೆಯ ವೃದ್ಧೆಗಾಗಿ ಕಾಯುತ್ತಿದ್ದರಂತೆ!) ನನ್ನ ಸೀರೆ ನೋಡಿ ಏದುಬ್ಬಸ ಪಡುತ್ತಾ ಒಬ್ಬಾಕೆ ಬೇಗ ಬೇಗ ಬಂದು ''ಇಂಡಿಯನ್?'' ನಿನ್ನ ಉಡುಪಿನಿಂದಲೇ ನನಗೆ ಗೊತ್ತಾಯಿತು! ಒಂದು ನಿಮಿಷ ನಿಲ್ಲು, ನನಗೆ ನಿಮ್ಮ ದೇಶದ ಬಗ್ಗೆ ಬಹಳಷ್ಟು ಗೊತ್ತು! ನನ್ನ ಮೊಮ್ಮಕ್ಕಳಿಬ್ಬರೂ ನಿಮ್ಮ ದೇಶದ ಅನಾಥಾಲಯದಿಂದ legally ಬಂದ ಮಕ್ಕಳೇ. ಅವರ ಫೋಟೋ ನೋಡುವೆಯಂತೆ'' ಎಂದು ಎರಡು ಮುದ್ದಾದ ಮಕ್ಕಳ ಫೋಟೋ ತೋರಿಸಿದರು. ''ನನ್ನ ಅಳಿಯ ವೈದ್ಯರು ಎರಡು

- ಮೂರು ಸಲ ನಿಮ್ಮ ದೇಶಕ್ಕೆ conference ಗಳಿಗೆಂದು ಹೋಗಿ ಅಲ್ಲಿನ ಅನಾಥಾಲಯಗಳಲ್ಲಿರುವ ಮಕ್ಕಳನ್ನು ನೋಡಿ impress ಆಗಿ, ಇಬ್ಬರನ್ನು ದತ್ತು ತೆಗೆದುಕೊಂಡು ಬಂದಿದ್ದಾರೆ. ಈಗ ಮಕ್ಕಳೂ happy, ನಾವಂತೂ very happy!" ಅಂದಾಗ ನನಗೆ ಬೇವು-ಬೆಲ್ಲ ಉಂಡಂತಾಯಿತು ಎಂದು ಹೇಳಬೇಕಿಲ್ಲ!

ಮಿನಿಯಾ ಪೊಲಿಸ್‌ನಿಂದ ಸ್ಯಾನ್ ಫ್ರಾನ್ಸಿಸ್ಕೊಗೆ ಹೋದ ವಿಮಾನ 20 ನಿಮಿಷ ಮುಂಚಿತವಾಗಿಯೇ ತಲುಪಿಬಿಟ್ಟಿತು. ನನ್ನನ್ನು ರಿಸೀವ್ ಮಾಡಲು ನನ್ನ ತಮ್ಮಂದಿರು ಬರುವವರಿದ್ದರು. ನಾವೆಲ್ಲ ಬಹಳ ನಿಧಾನಸ್ಥರು ಟೈಂಗೆ ಸರಿಯಾಗಿರಲು ಪರದಾಡುತ್ತೇವೆ. ಇನ್ನು ಮುಂಚೆ ಬರುವುದು ಅಸಂಭವ ಎಂದು ಎಲ್ಲರೂ ಇಳಿದ ಮೇಲೆ ಕಡೆಯವಳಾಗಿ ನಾನಿಳಿದೆ. ನಾನು ಬಾಗಿಲ ಬಳಿ ಹೋಗುವಷ್ಟರಲ್ಲಿ ಪೈಲಟ್ ಹಾಗೂ ಕೋ-ಪೈಲಟ್ ಕಾಕ್‌ಪಿಟ್‌ನಿಂದ ಹೊರ ಬರುತ್ತಿದ್ದವರು ನನ್ನನ್ನು ನೋಡಿ 'ಹಾಯ್' ಎಂದರು. ನಾನು ಪ್ರತಿ ಹೇಳಿ ಹೋಗುತ್ತಿದ್ದವಳನ್ನು ಪೈಲಟ್ ನಿಲ್ಲಿಸಿ ''ಇಂಡಿಯನ್?'' ಅಂದ. ಹೌದೆಂದೆ. ನನ್ನನ್ನು ನೋಡಿ ಅಡಿಯಿಂದ ಮುಡಿಯವರೆಗೆ ಮೆಚ್ಚುಗೆಯ ನೋಟವನ್ನು ಬೀರಿ, ''ಯೂ ಲುಕ್ ಬ್ಯೂಟಿಫುಲ್! ನಿನ್ನ ಡ್ರೆಸ್ ಬಹಳ ಚೆನ್ನಾಗಿದೆ'' ಎಂದ. ಧನ್ಯವಾದ ಹೇಳಿ ಮನಸ್ಸಿನಲ್ಲಿ "You are late by 25 years" ಮತ್ತು ''ನಿನ್ನ ಮೊದಲನೆಯ compliment ನನ್ನ ದೇಶದಲ್ಲಿ ನನಗೆಂದೂ ಲಭಿಸದು'' ಅಂತ ನಕ್ಕು ಮುಂದುವರೆದೆ.

ಮಾಲ್ ಒಂದರಲ್ಲಿ ಶೆಲ್ಫ್‌ಗಳ ಆ ಕಡೆ ಪಿಸುಮಾತು ಕೇಳಿಬಂತು, ಕನ್ನಡ! ಕಿವಿ ಚುರುಕಾಯ್ತು! ಅಸಭ್ಯ ಅನ್ನಿಸಿದರೂ ಕನ್ನಡಾಂಬೆಯ ಶರಣು ಹೇಳಿ ಕೇಳಿಸ್ಕೊಳ್ತಾ ಹೋದೆ. ಒಂದು ಹೆಣ್ಣಿನ ಧ್ವನಿ.

''ನನ್ನ ಕ್ಲಾಸ್‌ನಲ್ಲಿ ಶ್ಯಾಮಲ ಅಂತಿದ್ಲು ಅವಳ ಮೆಚ್ಚಿನ ಸೀರೆ ಹೀಗೇನೇ ಇತ್ತು. ಅಲ್ಲಿ ಕಾಣಿಸ್ತಾ ಇಲ್ವಾ, ಹಾಗೇನೇ favourite ಅಂದ್ಬಿಟ್ಟು ವಾರಕ್ಕೆರಡುಸಾರಿ ಆದ್ರೂ ಉಡುತ್ತಿದ್ದಳು ಅದೇ ಸೀರೇನಾ! ಅವಳ ಟ್ರೇಡ್ ಮಾರ್ಕ್ ಸೀರೆ ಅದು ಅಂತ ರೇಗಿಸ್ತಾ ಇದ್ವಿ, ಕಣೋ!''

ಇನ್ನು ನನಗೆ ತಡ್ಕೊಳ್ಳೇಕೆ ಆಗ್ಲೇ ಇಲ್ಲ! ತಕ್ಷಣ ಆ ಕಡೆಯಿಂದ ಶೆಲ್ಫ್‌ನ ಈ ಕಡೆಗೆ ಬಂದಾಗ ಕಂಡದ್ದು ನನ್ನ 20 ವರ್ಷದ ಹಿಂದಿನ ಗೆಳತಿ, ಅಲಮೇಲು! ಕೋಲಿನಂತಿದ್ದವಳು ಕುಂಬಳದಂತಾಗಿದ್ದವಳನ್ನು ನನಗೆ ಖಂಡಿತ ಗುರ್ತಿಸ ಲಾಗುತ್ತಿರಲಿಲ್ಲ, but for my a gold saree!

ನೋಡಿದಿರಾ? ಕಡೆಗೂ ನನ್ನ intution ಸರಿ ಆಯ್ತು, ನನ್ನನ್ನೂ ಯಾರೋ ಒಬ್ಬರು ಗುರ್ತು ಹಿಡಿದರು ಅದೂ ಅಮೇರಿಕಾದಲ್ಲಿ!

ದೆವ್ವಗಳು, ಇತ್ಯಾದಿ

• ಭಕ್ತ

ಕಳ್ಳತನ, ದರೋಡೆ, ರಸ್ತೆ ಅಪಘಾತ ಇವೆಲ್ಲಾ ಕಾಂಕ್ರೀಟ್ ಕಾಡುಗಳಂತಹ ಪಟ್ಟಣಗಳಲ್ಲಿ ದಿನವಹಿ ಕೇಳಿಬರುವ ಸುದ್ದಿಗಳಾದರೂ ಪಟ್ಟಣವಾಸಿಗಳು ತಾವೆಷ್ಟು ಅದೃಷ್ಟಶಾಲಿಗಳು ಎಂಬುದನ್ನು ತಿಳಿಯರು. ಈ ಕೃತ್ಯಗಳು ಎಷ್ಟೇ ಘೋರವಾಗಿದ್ದರೂ ಅವೆಲ್ಲಾ ಪರಿಚಿತ ಪ್ರಪಂಚದ ಆಗುಹೋಗುಗಳಷ್ಟೇ. ತೀರ ಅಪರಿಚಿತ ಅವ್ಯಕ್ತ, ನಿಗೂಢ ಪ್ರದೇಶದಲ್ಲಿ ವಾಸ ಮಾಡುವಾಗ ಜೀವನ ಎಷ್ಟು ದುರ್ಭರವಾಗಬಲ್ಲುದು ಎಂಬುದು ಅವರ ಊಹೆಗೂ ನಿಲುಕದು.

ಒಂದು ದೊಡ್ಡ ಹಳ್ಳಿ ಎನ್ನಬಹುದಾದ ಸಣ್ಣ ಊರಿನಲ್ಲಿ ಬೆಳೆದು ಬಂದ ನಮಗೆ ಈ ದುರ್ಭರತೆ ದಿನನಿತ್ಯದ ಅನುಭವ. ಅಲ್ಲಿ ಬೆಳಗು ಬೇಗ ಮುಗಿದು ರಾತ್ರಿಗಳು ಕಾಲೆಳೆದು ಸಾಗುತ್ತಿದ್ದಂತೆ ಭಾಸವಾಗುತ್ತಿತ್ತು. ಇಲೆಕ್ಟ್ರಿಸಿಟಿ ಆಗತಾನೆ ಬಳಕೆಗೆ ಬರುತ್ತಿದ್ದ ಆ ದಿನಗಳಲ್ಲಿ ಕತ್ತಲು ತುಂಬಿದ್ದ ಪ್ರದೇಶಗಳು ಮನೆಯ ಸುತ್ತ ಅಲ್ಲಲ್ಲಿ ಹರಡಿಕೊಂಡಿದ್ದವು. ದೀಪಗಳಿಲ್ಲದ ಬೀದಿಗಳಲ್ಲಿನ ಜನ ಬೇಗನೆ ಮಲಗಿ ಪ್ರಕೃತಿಯ ಶಬ್ದ ವಿಶೇಷಗಳಿಗೆ ಕಿವಿಗೊಡುತ್ತಿದ್ದರು.

ಪ್ರಕೃತಿ ಬಹು ಶ್ರೀಮಂತವಾಗಿದ್ದ ಕಾಲವದು. ಮನೆಯ ಸುತ್ತಲಿನ ದೈತ್ಯಾಕಾರದ ಮರಗಳು ಕ್ರಮೇಣ ಸ್ವಲ್ಪ ದೂರ ಸಾಗುವಷ್ಟರಲ್ಲಿ ದಟ್ಟವಾದ ಕಾಡುಗಳಾಗಿ ಬದಲಾಗುತ್ತಿದ್ದವು. ಸೂರ್ಯನ ಕಿರಣಗಳು ನೆಲದ ಮಟ್ಟದಲ್ಲಿದ್ದ ಗಿಡಗಂಟೆಗಳನ್ನು ತಲುಪಲಾರದಷ್ಟು ಹೊರವಾಗಿ ಮರಗಳ ಹಸಿರು ಕಾಡನ್ನು ತುಂಬಿತ್ತು. ಇಷ್ಟು ಸಮೃದ್ಧವಾದ ಹಸಿರಿನ ನಡುವೆ ಪ್ರಾಣಿಗಳಿಗೇನು ಕೊರತೆಯೇ. ಬೀಸುವ ಗಾಳಿಗೆ ಕಿರ್ರೆಂದು ಮೈ ಮುರಿಯುತ್ತಿದ್ದ ಮರಗಳ ಸನ್ನಿಧಿಯಲ್ಲಿ ಕಪ್ಪೆಗಳು ತಮ್ಮ ವಟಗುಟ್ಟುವಿಕೆಯನ್ನು ಅವ್ಯಾಹತವಾಗಿ ನಡೆಸಿದ್ದವು. ಮಿಡತೆಗಳ ಚಿಟಿಪಿಟಿ, ನಾಯಿಗಳ ಬೊಗಳು, ಕೋಳಿಗೂಡುಗಳನ್ನು ಹೊಂಚುತ್ತಿದ್ದ ನರಿಗಳ ಕೂಗು, ದೂರದಲ್ಲಿ ತೋಳಗಳ ಆಕ್ರಂದನ, ಹಯೆನಾಗಳ ವಿಲಕ್ಷಣ ನಗೆ, ಒಮ್ಮೊಮ್ಮೆ ಮರಗಳ ಮೇಲೆ ಆಶ್ರಯ ಪಡೆದಿದ್ದ ಮಂಗಗಳು ಒಮ್ಮೆಲೆ ಒಟ್ಟಿಗೆ ಕಿರಿಚಾಡಲು ಪ್ರಾರಂಭಿಸಿದಾಗ ಎಲ್ಲಿಂದಲೋ ಮೂಡಿಬಂದ ಆಳವಾದ ಘರ್ಜನೆ, ಇವೆಲ್ಲಾ ಆ ಮಲೆನಾಡಿನ ಮನೆಯ ಕಿಟಕಿಯಿಂದ ಸಮ್ಮತ್ತ ತೇಲಿ ಬಂದು, ನಿದ್ದೆಯನ್ನು ನಟಿಸುತ್ತಿದ್ದ ನಮಗೆ ರಾತ್ರಿ ಮುಗಿಯುವುದೇ ಇಲ್ಲವೇನೋ ಅನ್ನಿಸುವಂತೆ ಮಾಡಿತ್ತು. ಇವೆಲ್ಲದರ ನಡುವೆ, ನಿಶಿರಾತ್ರಿಯಲ್ಲಿ ಯಾರೋ ಒಬ್ಬಾತನ ನೋವಿನ ಕೂಗು, ಯಾವುದೋ ಹೆಂಗಸಿನ ಕರುಳಿನಿಂದ ಹೊಮ್ಮಿದಂತಿದ್ದ ಚೀರಾಟ ಅಥವಾ ಬಿಕ್ಕಿಬಿಕ್ಕಿ ಅಳುವ ಸದ್ದಾದರಂತೂ ಅದು ನೇರವಾಗಿ ನಮ್ಮ ಹೃದಯವನ್ನು ಹೊಕ್ಕು ನಾವು ಭಯದಿಂದ ವಿಹ್ವಲರಾಗುತ್ತಿದ್ದೆವು. ಬೆಳಗಿನ ಸಮಯದಲ್ಲಿ ಸಾಮಾನ್ಯ ಶಬ್ದಗಳಾಗಿದ್ದಿರಬಹುದಾದರೂ ಮಲೆನಾಡಿನ ಭೀಕರ ಕತ್ತಲೆಯಲ್ಲಿ ಆ ಶಬ್ದಗಳು

ಕಿವಿಗೆ ಬಿದ್ದಾಕ್ಷಣ ನಾವೆಲ್ಲಾ ಹಾಸಿಗೆಗಳಿಂದ ಜಿಗಿದೆದ್ದು ದೊಡ್ಡವರ ಬಳಿಗೆ ಓಡಿ ಢವಗುಟ್ಟುತ್ತಿದ್ದ ಹೃದಯಗಳಿಂದ ಅವರನ್ನು ಅಪ್ಪುತ್ತಿದ್ದೆವು. ನಮಗೆ ಧೈರ್ಯ ಬರಲೆಂದು ಅವರು ''ಏನೂ ಇಲ್ಲ ನೋಡು ಮರಿ'' ಎನ್ನುತ್ತಾ ನಮ್ಮನ್ನು ಎತ್ತಿ, ಗಾಢವಾದ ಅಂಧಕಾರದತ್ತ ತೆರೆದ ಕಿಟಕಿಗೆ ನಮ್ಮ ಮುಖಗಳನ್ನು ಒಡಿಯುವುದು ವಾಡಿಕೆಯಾಗಿತ್ತು.

ಇಂತಹ ಪರಿಸರದಲ್ಲಿ ನಾವು ದೆವ್ವಗಳನ್ನು ಕಾಣುತ್ತಿದ್ದುದು ತೀರ ಸಹಜ. ನಾನು ಮೊದಲು ಕಂಡ ದೆವ್ವ, ಹ್ಯಾಮ್ಲೆಟ್ ಕಂಡಂತಹ ಮಾನವಾಕೃತಿಯಾಗಿರಲಿಲ್ಲ. ದೂರದ ಕತ್ತಲಿನಲ್ಲಿ, ಸಾಲುಹಿಡಿದು ಸಾಗುತ್ತಿದ್ದ ಮಿನುಗುವ ಬೆಳಕುಗಳನ್ನು ನೋಡಿ ಮೊದಲು ನಾನು ಚಕಿತನಾಗಿದ್ದೆ. ಅವು ಕೊಳ್ಳಿದೆವ್ವಗಳು ಎಂಬುದು ಅನಂತರ ನನಗೆ ತಿಳಿದದ್ದು. ಎಣ್ಣೆಯಲ್ಲಿ ಅದ್ದಿದ ಬಟ್ಟೆಗಳನ್ನು ಕೋಲಿನ ತುದಿಗೆ ಸುತ್ತಿ, ಉರಿಯುವ ಪಂಜುಗಳನ್ನು ಹಿಡಿದು ಹೋಗುತ್ತಿದ್ದ ಈ ಕೊಳ್ಳಿದೆವ್ವಗಳಿಂದ ಯಾರಿಗೂ ಅಪಾಯವಿರಲಿಲ್ಲ. ಆದರೂ ದೆವ್ವ ದೆವ್ವವೇ. ಹಿರಿಯರು ಇವುಗಳಿಂದ ಯಾರಿಗೂ ಅಪಾಯವಿಲ್ಲ ಎನ್ನುತ್ತಿದ್ದ ಮಾತುಗಳೇ ಇವುಗಳ ಇರವನ್ನು ಸಾಬೀತುಗೊಳಿಸುವುದರಲ್ಲಿ ಯಶಸ್ವಿಯಾಗಿತ್ತು. ಬಾಲ್ಯದ ಕಲ್ಪನಾ ಜಗತ್ತಿಗೆ ಹಳ್ಳಿಯ ನಂಬಿಕೆಗಳು ಸೇರಿ ನಿಜಕ್ಕೂ ಒಂದು ಪ್ರೇತಪ್ರಪಂಚವೇ ಸೃಷ್ಟಿಯಾಗಿತ್ತೆನ್ನಬಹುದು. ಎಲ್ಲರ ಮನೆಗಳಲ್ಲೂ ಇದೇ ಕತೆಯಾಗಿದ್ದರಿಂದ ನಾವು ಯಾವುದಾದರೂ ದೂರದ ತೋಟದಲ್ಲಿನ ಮನೆಗೆ ಪರಿಚಿತರನ್ನು ಭೇಟಿ ಮಾಡಲು ಹೋದಾಗ ಆ ಮನೆಯ ಹುಡುಗ ನಮ್ಮೊಂದಿಗೆ ತಾನು ದೆವ್ವವನ್ನು ಶೌರ್ಯದಿಂದ ಇದುರಿಸಿದ್ದನ್ನು ಜಂಭದಿಂದ ಹೇಳುವುದು ಸಾಮಾನ್ಯವಾಗಿತ್ತು. ಹಾಡಹಗಲಿನಲ್ಲಿ ಮನೆ ಮೇಲೆ ಕಲ್ಲುಗಳು ಟಪಟಪನೆ ಬಿದ್ದುದನ್ನು ಅವನು ವರ್ಣಿಸಿದ ನಂತರ ನಮ್ಮ ಪರಿಚಿತ ದೆವ್ವಗಳ ಪಟ್ಟಿಗೆ ಒಂದು ಹೊಸ ಸ್ಪೆಸಿಮನ್ ಸೇರುತ್ತಿತ್ತು.

ನಾವುಗಳೆಲ್ಲಾ ಹೀಗೆ ರಾತ್ರಿಗೆ ಹೆದರುತ್ತಲೇ ಬೆಳೆದೆವು. ಪರೀಕ್ಷೆ ಕಾಲ ಬಂತೆಂದರೆ ಈ ಹೆದರಿಕೆಯನ್ನು ಸ್ಥೈರಿಸಿಕೊಂಡು ನಾವು ಓದಬೇಕಾಗಿತ್ತು. ಒಂದು ರಾತ್ರಿ ಮೇಣದ ಬತ್ತಿಯ ಮಬ್ಬು ಬೆಳಕಿನಲ್ಲಿ ನಾನು ಓದುತ್ತಾ ಕುಳಿತಿದ್ದಾಗ ಅಕಸ್ಮಾತ್ತಾಗಿ ಗಾಳಿ ಬೀಸಿ ದೀಪ ಆರಿ ಒಮ್ಮೆಲೇ ಕತ್ತಲು ಆವರಿಸಿತು. ಹೆದರಿ ನಡುಗುತ್ತಾ ನಾನು ಮಂಚ ಏರಿ ರಗ್ಗನ್ನು ಕವಿಚಿಕೊಂಡೆ. ಒಂದೆರಡು ನಿಮಿಷ ಆಗಿರಬಹುದು ಮಂಚ ಮೆಲ್ಲನೆ ತೂಗಾಡಲು ಪ್ರಾರಂಭಿಸಿತು. ತೀರ ಕೆಟ್ಟ ಧೈರ್ಯ ತೋರಿಸಬಾರದು ಎಂದುಕೊಂಡು ಹಾಸಿಗೆಯಿಂದ ನೆಗೆದು ಕಿಟಾರನೆ ಕಿರುಚುತ್ತಾ ಸಹಾಯಕ್ಕಾಗಿ ಓಡಿದೆ. ನಮ್ಮಪ್ಪ, ಸಾಧಾರಣವಾಗಿ ಅವನದ್ದು ಕುಂಭಕರ್ಣನ ನಿದ್ದೆ, ಆ ರಾತ್ರಿ ಎಲ್ಲರಿಗಿಂತ ಮೊದಲು ಎದ್ದು ನನ್ನ ಭುಜಗಳನ್ನು ಹಿಡಿದು ''ಗಂಡ್ಸಂತೆ ಗಂಡ್ಸು, ಯಾಕೆ ಹೀಗೆ ಹೆದರಿ ಸಾಯ್ತೀಯೋ'' ಅಂತ ಛೀಮಾರಿ ಹಾಕಿದರು. ನಮ್ಮಪ್ಪನ ಹೆದರಿಕೆಯಿಂದಲೋ ಏನೋ ಆ ಕ್ಷಣಕ್ಕೆ ದೆವ್ವದ ಹೆದರಿಕೆ ಮಾಯವಾಯಿತು. ಅಂದಿನಿಂದ ಮಂಚ ತೂಗಾಡುವುದೂ ನಿಂತಿತು. ಆದರೂ ಪ್ರೇತಭಯ ಮನೆಯಲ್ಲಿ ಯಾರನ್ನೂ ಬಿಟ್ಟಿರಲಿಲ್ಲ. ಒಂದು ರಾತ್ರಿ ನಮ್ಮ ಮನೆಯ

ಅಡುಗೆಯವ ಕೈಯ್ಯಲ್ಲಿ ಚಾಕು ಹಿಡಿದು ಚೀರಾಡುತ್ತಾ ಮನೆಯಲ್ಲೆಲ್ಲಾ ಓಡಾಡಿದ. ಅವನ ಉದ್ದನೆಯ ಕೂದಲು ಆ ದೃಶ್ಯವನ್ನು ಇನ್ನೂ ಭಯಾನಕಗೊಳಿಸಿತ್ತು. ಮನೆಯ ತಿಳುವಳಿಕಸ್ತರು ಅವನ ನಡವಳಿಕೆಯ ವಿಶ್ಲೇಷಣೆ ನಡೆಸುತ್ತಾ, ''ಈ ನಾಯರ್, ಮಲೆಯಾಳಿ. ಅವರೆಲ್ಲಾ ಮಂತ್ರ, ತಂತ್ರ ಮಾಡೋರು. ಏನೋ ಹೆಚ್ಚು ಕಮ್ಮಿ ಆಗಿರಬೇಕು'' ಎನ್ನತೊಡಗಿದ ಮೇಲೆ ಅವ ಕೆಲಸ ಬಿಡಬೇಕಾಯಿತು.

ಯಾವಾಗಲೂ ಗಂಭೀರವಾಗಿರುತ್ತಿದ್ದ ನಮ್ಮ ಅತ್ತೆ ಒಬ್ಬರು, ಆಕೆ ವಿಧವೆ, ಒಮ್ಮೆಲೇ ತಾನು ಹಿಂದೆಂದೋ ಕಾಲವಾಗಿದ್ದ ಒಬ್ಬಳೆಂದು ಹುಚ್ಚುಹುಚ್ಚಾಗಿ ಕೂಗಾಡತೊಡಗಿದಾಗ, ನಮ್ಮನ್ನೆಲ್ಲಾ ಒಂದು ರೂಮಿನಲ್ಲಿ ಕೂಡಿ ಹಾಕಿದರು. ಆದರೂ ರೂಮಿನ ತೆರೆದ ಕಿಟಕಿಯಿಂದ ನಾವು ಹೊರಗಿನ ವಿದ್ಯಮಾನಗಳನ್ನು ನೋಡಬಹುದಾಗಿತ್ತು. ಅಂದು ಊರಿನ ಮಾಂತ್ರಿಕರನ್ನು ಕರೆಸಿದ್ದರು. ವಿಚಿತ್ರವೆಂದರೆ ಆ ಮಾಂತ್ರಿಕರೂ ಸಹಾ ನಮ್ಮ ಅಡುಗೆಯವನಂತೆ ಉದ್ದನೆ ಕೂದಲು ಬಿಟ್ಟಿದ್ದರು. ನಮ್ಮ ಅತ್ತೆಯೊಡನೆ ಅವರು ಬಹಳ ಒರಟಾಗಿ ಮಾತನಾಡಿದಾಗ, ಅತ್ತೆ ಸಹಾ ಅಷ್ಟೇ ಒರಟಾಗಿ ಉತ್ತರಿಸಿದ್ದು ಇಂದಿಗೂ ನೆನಪಿದೆ. ನಮ್ಮ ಅತ್ತೆಗೆ ಪೂರಾ ಹುಚ್ಚು ಹಿಡಿದಂತಿತ್ತು. ಕಾಲ ಸರಿದಂತೆ ಅವರಿಗೆ ದೆವ್ವ ಹಿಡಿದಿದೆಯೆಂದು ನಮಗೆ ತಿಳಿಯಿತು. ಅವರಿಗಾದ ಚಿಕಿತ್ಸೆ ದೆವ್ವವನ್ನು ಬಿಡಿಸಿರಲಿಲ್ಲ. ಬಹಳ ಕಾಲ ಆಕೆ ಜ್ವರದಿಂದ ಬಳಲಿದವರಂತೆ ಹಾಸಿಗೆ ಹಿಡಿದಿದ್ದರು. ಆಮೇಲೆ ಆಕೆ ಸರಿಹೋಗಿ ಎಂದಿನಂತೆ ಭಾನುವಾರದ ದಿನ ನಮಗೆ ಎಣ್ಣೆಸ್ನಾನ ಮಾಡಿಸಲು ಪ್ರಾರಂಭಿಸಿದರು ಅನ್ನಿ.

ಆ ಅನುಭವದ ನಂತರ ದೆವ್ವಗಳ ಇರವಿನ ಬಗ್ಗೆ ನಮ್ಮ ಮನಸ್ಸಿನಲ್ಲಿ ಗೊಂದಲವೆದ್ದಿತು. ದೊಡ್ಡವರೇನೋ ದೆವ್ವ ಅನ್ನೋದು ಇಲ್ಲವೇ ಇಲ್ಲ ಅಂತ ಖಡಾಖಂಡಿತವಾಗಿ ಹೇಳಿದರೂ ನಮ್ಮ ಅತ್ತೆಯನ್ನು ದೆವ್ವ ಹಿಡಿದುಕೊಂಡಿದ್ದಕ್ಕೆ ಯಾವ ವಿವರಣೆಯನ್ನೂ ಕೊಡುತ್ತಿರಲಿಲ್ಲ. ಹಾಗಾಗಿ ನಾನು ಊರು ಬಿಟ್ಟು ಬೆಂಗಳೂರಿಗೆ ವಲಸೆ ಬಂದಾಗ ಜೊತೆಗೆ ದೆವ್ವಗಳನ್ನೂ ತರಬೇಕಾಯಿತು. ಬೆಂಗಳೂರಿನಲ್ಲಿ ನಾವು ಆರಿಸಿದ ಮನೆ ಆಗಿನ ಕಾಲಕ್ಕೇನು, ಈಗಿನ ಕಾಲಕ್ಕೂ ದೊಡ್ಡದು ಅಂತಲೇ ಹೇಳಬಹುದು. ಮನೆಯ ಸುತ್ತಲಿನ ವಿಶಾಲವಾದ ಕಾಂಪೌಂಡಿನ ನಡುವೆ ಒಂದು ಹಳೆಯ ಬಾವಿ ಇತ್ತು.

ನಮ್ಮ ಹೊಸ ಮನೆಗೆ ವಾಸಿಸುವುದಕ್ಕೆ ಬಂದ ಹೊಸದರಲ್ಲೇ ನನ್ನ ಹಿರಿಯ ಅಕ್ಕನ ಮದುವೆ ನಡೆಯಿತು. ನನ್ನ ಭಾವ ಶ್ರೀಮಂತ ವ್ಯಾಪಾರಿಗಳೊಬ್ಬರ ಮಗ. ಇವತ್ತಿಗೂ ಅಂತಹ ಅದ್ದೂರಿಯಲ್ಲಿ ಅದ್ದೂರಿಯಾದ ಮದುವೆಯನ್ನು ನಾನು ನೋಡಿಯೇ ಇಲ್ಲ. ಆಗತಾನೇ ಸಿನಿಮಾ ಪ್ರಪಂಚಕ್ಕೆ ಕಾಲಿಡುತ್ತಿದ್ದ ವೈಜಯಂತಿಮಾಲಾ ಅಂದಿನ ಮದುವೆಯ ರಿಸೆಪ್ಷನ್ನಿನಲ್ಲಿ ನರ್ತನದ ಕಾರ್ಯಕ್ರಮವೊಂದನ್ನು ನೀಡಿದ್ದಳು. ಮದುಮಕ್ಕಳಾದಿಯಾಗಿ ಆ ಸಮಾರಂಭದಲ್ಲಿದ್ದ ಎಲ್ಲರೂ ಬಿಟ್ಟ ಕಣ್ಣುಗಳಿಂದ ವೈಜಯಂತಿಮಾಲಳನ್ನೇ ನೋಡುತ್ತಿದ್ದುದಕ್ಕೆ ಅಂದು ತೆಗೆದ ಫೋಟೋಗಳೇ ಸಾಕ್ಷಿ. ಬೆಂಗಳೂರಿನ ಗಣ್ಯ ಸಮೂಹವೇ ಅಂದು ಅಲ್ಲಿ ನೆರೆದಿತ್ತು.

ಊರು ಬಿಟ್ಟು ಬೆಂಗಳೂರಿಗೆ ಬಂದಾಗ ನಮ್ಮ ಸಕಲ ಪರಿವಾರವೂ ನಮ್ಮೊಂದಿಗೆ ಪ್ರಯಾಣ ಬೆಳೆಸಿತ್ತು. ಮನೆಯ ಆಳುಗಳು, ಅಡುಗೆಯವರು, ಡ್ರೈವರುಗಳಾದಿಯಾಗಿ ಎಲ್ಲರಿಗೂ ನಮ್ಮ ಮನೆಯಲ್ಲೇ ಬಿಡಾರ. ಮದುವೆಯ ಗಲಾಟೆಯೆಲ್ಲಾ ಮುಗಿದ ಮೇಲೆಯೂ ಸಹಾ ಹಲವು ಸಿಬ್ಬಂದಿ ಇಲ್ಲಿಯೇ ಉಳಿದುಕೊಂಡರು. ಹೀಗೆ ಉಳಿದುಕೊಂಡವರಲ್ಲಿ ಮುಹಮದ್ ಆಲಿ ಒಬ್ಬ. ಆಲಿ ನಮ್ಮೊಂದಿಗಿರಲು ನಿಶ್ಚಯಿಸಿದ್ದಕ್ಕೆ ನಾವು ಕೊಡುತ್ತಿದ್ದ ಪುಡಿಕಾಸಿಗಿಂತ ನಮ್ಮ ಬಗ್ಗೆ ಅವನಿಗಿದ್ದ ಅಗಾಧ ನಿಯತ್ತು, ನಿಷ್ಠೆಗಳೇ ಕಾರಣ.

ಅವನು ಸಾಧಾರಣವಾಗಿ ಗೆಸ್ಟ್ ರೂಮಿನಲ್ಲಿ ಮಲಗುತ್ತಿದ್ದ. ಒಂದು ರಾತ್ರಿ ಆತ ಚೀರಾಡುತ್ತಾ ರೂಮಿನಿಂದ ಎದ್ದು ಓಡಿ ಹೊರಗೆ ಬಂದ. ಭಯಂಕರ ಹೆದರಿಕೆ ಅವನನ್ನು ಆವರಿಸಿತ್ತು. ಯಾವುದೋ ಹೆಂಗಸು ಅವನ ಕುತ್ತಿಗೆಯ ಮೇಲೆ ಕುಳಿತಿದ್ದಳಂತೆ. ಆಕೆ ಉಟ್ಟ ಬಿಳಿಯ ಸೀರೆ, ಉದ್ದನೆಯ ಕಪ್ಪು ಕೇಶರಾಶಿ ಇವುಗಳನ್ನೆಲ್ಲಾ ಆತ ತೊದಲುತ್ತಲೇ ವಿವರಿಸಿದ. ಚೇತರಿಸಿಕೊಳ್ಳಲೆಂದು ಅವನನ್ನು ನರ್ಸಿಂಗ್ ಹೋಮ್ ಒಂದಕ್ಕೆ ವರ್ಗಾಯಿಸಿದೆವು. ಸ್ವಲ್ಪ ಗುಣವಾದ ಮೇಲೆ ಆತ ಹೇಳದೇ ಕೇಳದೇ ಊರಿಗೆ ಓಡಿ ಹೋದ ಸುದ್ದಿ ನಾವಿದ್ದ ಅಕ್ಕಿತಿಮ್ಮನ ಹಳ್ಳಿಯ ಸುತ್ತ ಹರಡಿತು. ಹಳ್ಳಿಯ ಹಳಬರು ''ಆಲಿ ಘಟನೆ'' ಯನ್ನು ವಿವರಿಸುವುದಕ್ಕೆ ತಡಮಾಡಲಿಲ್ಲ. ಯಾವುದೋ ಹೆಂಗಸೊಬ್ಬಳು ಆ ಭಾವಿಯಲ್ಲಿ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಳಂತೆ. ಅವಳ ದೆವ್ವ ಆಲಿಯನ್ನು ಕುತ್ತಿಗೆ ಹಿಸುಕಿ ಕೊಲ್ಲಲು ಪ್ರಯತ್ನಿಸಿತಂತೆ ಇತ್ಯಾದಿ.

ಇದೆಲ್ಲಾ ನಡೆದು ನಾಲ್ಕು ದಶಕಗಳ ಮೇಲಾಯಿತು. ಅಂದಿನಿಂದ ಇದೇ ಮನೆಯಲ್ಲೇ ನಮ್ಮೆಲ್ಲರ ವಾಸ. ಮೊದಮೊದಲಿಗೆ ನಾನೂ ಸಹಾ ರಾತ್ರಿ ವೇಳೆಯಲ್ಲಿ ಬಾವಿಯ ಹತ್ತಿರ ಸುಳಿಯುತ್ತಿರಲಿಲ್ಲ. ಬಹುಶಃ ಆ ಬಿಳಿಯ ಸೀರೆ ಮೋಹಿನಿಯ ನೆನಪು ಮಾಸುವುದಕ್ಕೆ ಸ್ವಲ್ಪ ಕಾಲ ಬೇಕಾಗಿರಬಹುದು.

ವರ್ಷಗಳು ಉರುಳಿದಂತೆ ಬೆಂಗಳೂರು ಸಹಾ ಬೆಳೆದಿದೆ. ಒಮ್ಮೆ ಜಲ ಸಮೃದ್ಧವಾದ ಪಟ್ಟಣ ಈಗ ನೀರಿನ ಬರವನ್ನು ಇದುರಿಸಬೇಕಾಗಿದೆ. ನಮ್ಮ ಬಾವಿಯ ನೀರೇ ಈಗ ನಮಗೆ ಆಸರೆ. ಅದರ ನೀರು ಎಂದಿಗೂ ಬತ್ತಿಲ್ಲ. ನಮ್ಮ ಮನೆಗಷ್ಟೇ ಅಲ್ಲ, ಸುತ್ತಮುತ್ತಲಿನ ಅನೇಕ ಮನೆಗಳಿಗೆ, ಒಂದು ಕಲ್ಯಾಣ ಮಂಟಪಕ್ಕೆ ಅಷ್ಟೇ ಏಕೆ ಒಂದು ಕಾರ್ಖಾನೆಗೂ ಸಹಾ ಅದು ಯಥೇಚ್ಛವಾಗಿ ನೀರನ್ನು ಒದಗಿಸುತ್ತಿದೆ. ಪಕ್ಕದ ಅಕ್ಕಿತಿಮ್ಮನ ಹಳ್ಳಿಯ ಜನ ಮದುವೆ ಸಮಾರಂಭಗಳಿಗೆ ಹೆಚ್ಚುವರಿ ನೀರು ಬೇಕಾದಾಗ ನಮ್ಮ ಬಾವಿಗೇ ಶರಣು ಹೋಗುತ್ತಾರೆ. ಹಳ್ಳಿಯ ಹಳಬರು ಈಗ ಹಾಡುವ ಹಾಡೇ ಬೇರೆ. ''ಪಾಪ ಆ ಮಹತಾಯಿ, ನಮಗೆಲ್ಲಾ ಗಂಗೇನ ತರಿಸೋಕ್ಕೇ ಅಂತ ತನ್ನ ಪ್ರಾಣಾನೇ ಸಮರ್ಪಣೆ ಮಾಡಿದ್ಲು. ಅಂಥೋರಿಂದ್ಲೇ ಮಳೆಬೆಳೆ ಎಲ್ಲಾ'' ಎನ್ನುತ್ತಾರೆ ಅವರು.

ಹೇಗಿದ್ರೂ, ದೆವ್ವದ್ದೂ ಒಂದು ಕತೆ ತಾನೆ.

ಒಂದು ಶೌಚ(ನೀಯ) ಪ್ರಸಂಗ

• ನಾಗೂಶ್ರೀ ಸೂರಿ

ನಾವುಗಳು ಹೈಸ್ಕೂಲ್‌ನಲ್ಲಿ ಓದ್ತಾ ಇದ್ದಾಗ ನಮ್ಮ ಫಿಸಿಕ್ಸ್ ಟೀಚರ್ ರಾಮಣ್ಣನೋರು ನಮಗೆ ಅದೆಂಥದೋ ಗುರುತ್ವಾಕರ್ಷಣೆ, ಆರ್ಕಿಮಿಡೀಸನ ತತ್ವ, ಪ್ರೇರಿತ ಕಾಂತತ್ವ ಅಂತಲಂತೆ, ಅಂಥಾವುಗಳ ಬಗ್ಗೆ ವಾರಕ್ಕೆ ಎರಡು ಪೀರಿಯಡ್ಡು ನಮ್ಮಗಳ ಮುಂದೆ ತಲೆ ಚಚ್ಚಿಕೋತಾ ಇದ್ದರು. ಸ್ಕೂಲು ಬಿಟ್ಟು ಐವತ್ತು ವರ್ಷಾನೇ ಆಗಿದೆ, ಹಾಗಾಗಿ ಅದರಲ್ಲಿ ಅರ್ಥ ಮರೆತು ಹೋಗಿದೆ... ಮತ್ತೆ ಇನ್ನು ಅರ್ಥ ... ಅದು ಆ ಕಾಲದಲ್ಲೇ ತಲೆಗೆ ಹೋಗಿರಲಿಲ್ಲ.

ಆದರೆ ಅವರು ಒಂದು ಸಲ ಒಂದು ಕಥೆ ಹೇಳಿದ್ರು. ಅದು ಹಾಳಾದ್ದು ನನಗೆ ಈವತ್ತಿಗೂ ಚೆನ್ನಾಗಿ ಜ್ಞಾಪಕದಲ್ಲಿ ಉಳಿದುಕೊಂಡಿದೆ. ದೊಡ್ಡೋರು, ಚಿಕ್ಕೋರು, ಮಕ್ಕಳು, ಮುದುಕರು ಅನ್ನೋ ಒಂದೂ ಮುಲಾಜೇ ಇಲ್ಲದೆ ಯಾರು ಸಿಕ್ಕಿಕೊಂಡರೂ ಸರಿಯೇ ಅವರ ಮುಂದೆ ಈ ಕಥೆ ಹೇಳಿ ಈ ತಹಲ್‌ವರೆಗೂ ಒಂದು ರೀತಿ ಜ್ಞಾನಯಜ್ಞ ಮಾಡಿಕೊಂಡು ಬಂದಿದ್ದೀನಿ. ಈ ದೊಡ್ಡೋರು, ಬಡ್ಡೀಮಕ್ಕಳು, ಕೇಳೋತನಕಾ ಕೇಳಿಬಿಟ್ಟು ಆಮೇಲೆ, ''ಥತ್, ಬೇಕೂಫ - ವಾನಪ್ರಸ್ಥಕ್ಕೆ ಹೋಗೋ ವಯಸ್ಸಾಗಿದೆ... ಇನ್ನೂ ಗಂಭೀರ ಅನ್ನೋದನ್ನ ಕಲೀಲಿಲ್ಲ, ನೀನು'' ಅಂತ ಬೈದು ಹೋಗತಿರತಾರೆ. ಅದೇ ಈ ಚಿಕ್ಕಮಕ್ಕಳು?... ಒಂದು ನೂರುಸಲ ಅದೇ ಕಥೇನೇ ಹೇಳಿರಲಿ, ಒಂದು ಸಲ ಕೂಡ ''ತಾತಾ, ಇದು ಬಿಟ್ಟರೆ ನಿಮಗೆ ಬೇರೇ ಕಥೇನೇ ಗೊತ್ತಿಲ್ಲವೇ?'' ಅಂತ ಬೇಜಾರು ಮಾಡಿಕೊಂಡಿದ್ರೆ ಕೇಳಿ. On the other hand, ಸಹನೆಯಿಂದ ತಾವುಗಳು ಕೇಳೋದು ಇರಲಿ, ಅವಕಾಶ ಸಿಕ್ಕಾಗಲೆಲ್ಲಾ ಇತರೇ ತಮ್ಮ ಸ್ನೇಹಿತರನ್ನೂ ಕರಕೊಂಡು ''ತಾತಾ, ತಾತಾ, ಇವರುಗಳು ಕೇಳಿಲ್ಲವಂತೆ ... ಇನ್ನೊಂದು ಸಲ, ಇದೇ ಕೊನೇ ಸಲ, please'' - ಅಂತ ಬರತಾನೇ ಇರತ್ವೆ, ಕಾಲದಿಂದಲೂ.

ಆ time-tested ಕಥೆ ಹೀಗಿದೆ:

ಒಂದು ದಿನ ಬೆಳಗಿನ ಜಾಮ, ಬ್ರಹ್ಮ ಅರ್ಜೆಂಟಾಗಿ ಬಹಿರ್ದೇಶಕ್ಕೆ ಅಂತ ಹೊರಟಿದ್ದಾನೆ. ಅದೇ ಟೈಂಗೆ ಏಳೆಂಟು ಜನ ಜೂನಿಯರ್ ದೇವತೆಗಳು ಅವನನ್ನ ಹುಡುಕ್ಕೊಂಡು ಗಾಬರಿ ಗಾಬರಿಯಾಗಿ ಬರತಾರೆ.

''ಬ್ರಹ್ಮ, ಬ್ರಹ್ಮ - ಮತ್ತೆ, ಮತ್ತೆ...'' ಅಂತ ತೊದಲತಾರೆ.

''ಮತ್ತೆ, ಮತ್ತೆ ಅಂತ ಮುಲುಗಿದರೆ ಅದ್ಯಾವ ಗೂಬೇಗೆ ಅರ್ಥವಾಗಬೇಕು? ಏನಾಗಿದೆ ಅಂತ ಸ್ಪಷ್ಟವಾಗಿ ಬೊಗಳಬಾರದೆ?...'' ಅಸಹನೆಯಿಂದಲೇ ಕೇಳತಾನೆ

ಬ್ರಷ್ಟ - ಅವನಿಗೆ ಗಾಬರಿ, ಹೊರಟಿರೋ ಕೆಲಸಕ್ಕೆ ಎಲ್ಲಿ ಮುಹೂರ್ತ ಮೀರಿಯೋಗತ್ತೋ ಅಂತ.

''ಈಗ ತಾನೇ ವರ್ತಮಾನ ಬಂದಿದೆ... ಓೀಗೇ, ಲಂಕೇನಲ್ಲಿ ರಾವಣ ಹುಟ್ಟುಬಿಟ್ಟಿದ್ದಾನೆ, ಅಂತ ... ನಮಗೆ ಯಾಕೋ ಒಂದೂ ತೋಚತಾನೇ ಇಲ್ಲ, ಮುಂದೇನು ಗತಿ, ಅಂತ''

''ಅದೊಂದು ದೊಡ್ಡ ವಿಷಯ ಅಂತ ಉಟ್ಟಬಟ್ಟೇಲೇ ಓಡಿಕೊಂಡು ಬಂದ್ರಾ? ಆಯ್ತು, ಇಲ್ಲೇ ಈ ಪಡಸಾಲೇಲಿ ಕೂತಿರಿ, ಬಂದುಬಿಡತೀನಿ... ನಾನು ಈಗ ಸ್ವಲ್ಪ ಅರ್ಜೆಂಟಲ್ಲಿ ಇದ್ದೀನಿ''

ಒಂದು ಐದು ನಿಮಿಷ ಕೂಡ ಆಗಿರಲಿಲ್ಲ ಕೆಲಸ ಮುಗಿಸಿಕೊಂಡು ಅವನು ಬರೋ ಹೊತ್ತಿಗೆ.

''ಹ್ಞು, ಹೇಳಿ... ಅದೇನೋ ರಾವಣ, ಲಂಕೇ ಅಂತ ಗಾಬರೀಲಿ ಇದ್ರಲ್ಲ...''

''Nothing to worry... ನೀನು ಅಲ್ಲಿ ಹೋಗಿರೋ ಟೈಂನಲ್ಲಿ ಶ್ರೀರಾಮ ಅವನನ್ನ ಕೊಂದುಹಾಕಿ ಸೀತೇನ ಕರಕೊಂಡು ಊರಿಗೆ ವಾಪಸ್ ಹೋಗಿದ್ದಾನೆ''

ನಮ್ಮ ಫಿಸಿಕ್ಸ್ ಕ್ಲಾಸ್‌ನಲ್ಲಿ ಈ ಕಥೆ ಯಾತಕ್ಕೆ ಬಂತು ಅನ್ನೋದು ಮರೆತುಹೋಗಿದೆ. ಬಹುಶಃ ಆ ಮಂಡ್ಯದ ಕೃಷ್ಣಮಾಚಾರಿ - ಅವರು ಭಾರೀ ಕುಡುಮಿ - ಐನ್‌ಸ್ಟೈನಂದು Theory of Relativity ವಿಷಯ ಏನೋ ಪ್ರಶ್ನೆ ಕೇಳಿದ್ದ ಅನ್ನಿಸತ್ತೆ. ತಮಗೂ ವಿಷಯ ಸರಿಯಾಗಿ ಗೊತ್ತಿಲ್ಲದೇ ಇರೋದನ್ನ ಮುಚ್ಚೋಕ್ಕೆ ಟೀಚರ್ ಈ ಕಥೆ ಹೇಳಿ ಬಚಾವಾಗಿದ್ದಿರಬೇಕು.

ಈ ಕಥೆ ಇಲ್ಲಿಗೆ ಯಾತಕ್ಕೆ ಬಂತೂ ಅಂದರೆ ನಾನು ಈಚೆಗೆ ಒಂದು ಪುಸ್ತಕಾನ ಓದತಾ ಇದ್ದೆ. ಹಿಟ್ಲರನ್ನ ಕೊಂದುಹಾಕೋದಕ್ಕೆ ಅವನು ಜರ್ಮನೀನಲ್ಲಿ ಅಧಿಕಾರಕ್ಕೆ ಬರೋದಕ್ಕೆ ಸುಮಾರು ವರ್ಷ ಮುಂಚೇನೇ ಯಾವ ರೀತೀದೋ ಒಂದು ಯೋಜನೆ ತಯಾರಾಗಿತ್ತು, ಮತ್ತೆ ಯಾವ ಒಂದು ಜುಜುಬಿ ಕಾರಣದಿಂದಾಗಿ ಎಲ್ಲಾ ಎಡವಟ್ಟಾಗಿ ಮುಂದೆ ಎಷ್ಟೆಲ್ಲಾ ರಾಮಾಯಣಕ್ಕೆ ಅವಕಾಶ ಆಯಿತು ಅನ್ನೋದನ್ನ ಅದರಲ್ಲಿ ಹೇಳತಾರೆ, ಆ ಬುಕ್ಕು ಬರೆದೋರು.

1929 ರಲ್ಲಿ ಹಿಟ್ಲರ್ ಬರ್ಲಿನ್‌ನ Sportpalast (ಕ್ರೀಡಾ ಸೌಧ?) ನಲ್ಲಿ ಭಾಷಣ ಮಾಡೋದು ಇತ್ತು. ಅದಕ್ಕೋಸ್ಕರ ಅಲ್ಲಿಗೆ ಅವನು ಬರೋಕ್ಕೆ ಮುಂಚೆ ಸಿದ್ಧತೆಗಳನ್ನ ನಡಸತಾ ಇದ್ರು. ಅವರಲ್ಲಿ ಒಬ್ಬ ನಾಜ಼ಿ ಪಕ್ಷದ ಕಾರ್ಯಕರ್ತ ಹಿಟ್ಲರನ್ನ ಕೊಲ್ಲೋಕ್ಕೆ ಅಂತ ಯಾರಿಗೂ ಗೊತ್ತಾಗದ ಹಾಗೆ ವೇದಿಕೆ ಕೆಳಗೆ ಒಂದು ಬಾಂಬನ್ನ ಇಟ್ಟುಬಿಟ್ಟು ಹಿಟ್ಲರ್ ಬಂದು ಭಾಷಣ ಶುರೂ ಮಾಡಿಕೊಂಡಮೇಲೆ ಅದನ್ನ ಢಂ ಅನ್ನಿಸೋದಕ್ಕೆ ಅಂತ wiring ಮಾಡಿಕೊಂಡು ಕಾಯತಾ ಇದ್ದ.

ಹಿಟ್ಲರ್ ಬಂದ, ಭಾಷಣಾನೂ ಶುರೂ ಮಾಡಿಕೊಂಡ. ನಮ್ಮ ಪಿತೂರಿಗಾರ ಸರಿಯಾದ ಅವಕಾಶ - ಅಂದರೆ ಬಾಂಬ್ ಸಿಡಿದಾಗ ವೇದಿಕೇ ಮೇಲೆ ಇದ್ದ ಉಳಿದೋರಿಗೆ ಏನೂ ಆಗಬಾರದು ಆದರೆ ಹಿಟ್ಲರ್ ಮಾತ್ರ ಸಾಯಬೇಕು - ಅದಕ್ಕೆ ಕಾಯತಾ ಇದ್ದ.

ಅಷ್ಟರಲ್ಲಿ ಅವನಿಗೆ ಹಾಳಾದ್ದು ಲಂಡನ್‌ಗೆ ಹೋಗೋ ಅವಸರ ಹತ್ತಿಕೋತು. ಛೆ, ಎಂಥಾ ಕೆಲಸ ಆಯಿತು! ಹುಂ, ಮಿಕ್ಕೋರು ಸತ್ತರೂ ಪರವಾಗಿಲ್ಲ ಅಂದುಕೊಂಡು ಢಂ ಅನ್ನಿಸಿಬಿಡಲೇ ಅಂದುಕೊಂಡ ಒಂದು ಘಳಿಗೆ. ಮತ್ತೆ ಯೋಜನೆ ಮಾಡಿದ - "ಈ ಗೂಬೆ ಮಾತಾಡೋಕ್ಕೆ ಹತ್ತಿದ ಅಂದರೆ ಎರಡು ಘಂಟೆ ಆದ್ರೂ ನಿಲ್ಲಿಸೊಲ್ಲ. ಅಷ್ಟರಲ್ಲಿ ಒಂದು ಐದು ನಿಮಿಷ ಹೋಗಿಬಿಟ್ಟು ಬಂದರೆ ಪ್ರಪಂಚ ಏನೂ ಮುಳುಗಿಹೋಗೊಲ್ಲ..." ಅಂದುಕೊಂಡು ಹೊರಟ.

ಹೋದ, ಕಕ್ಕಸ್ ಮನೇದು ಅಗಳಿ ಹಾಕ್ಕೊಂಡ, ಹೋದ ಕೆಲಸ ಸಾಂಗವಾಗಿ ಮುಗಿಸ್ಕೊಂಡ. ಆವಾಗಲೇ ಆದದ್ದು ಭಾರೀ ಅನಾಹುತ - ಹೊರಗೆ ಬರೋಣ ಅಂದರೆ ಹಾಳಾದ್ದು ಆ ಅಗಳಿ ಕಚ್ಚಿಕೊಂಡುಬಿಟ್ಟದ್ದು ಏನು ಮಾಡಿದರೂ ಬರಲೊಲ್ಲದು... ಅದು ಮಾಡಿದ, ಇದು ಮಾಡಿದ, ಬಾಗಿಲನ್ನೇ ಬೂಡ್ಸ್‌ಕಾಲಲ್ಲಿ ಒದ್ದು ಒಡೆದುಹಾಕೋಕ್ಕೂ ನೋಡಿದ. ಊಹುಂ ... ತಿಪ್ಪರಲಾಗ ಹಾಕಿದ್ರೂ ಆ ಹಾಳು ಬಾಗಿಲು ಬಂದರಲ್ಲವೇ!

ಕೊನೆಗೂ ಸುಮಾರು ಒಂದು ಘಂಟೇನೇ ಆದಮೇಲೆ ಆ ಅಗಳಿ ಬಿಟ್ಟುಕೋತು. ಪಾಪದೋನು ನಮ್ಮ ಪಿತೂರಿಗಾರ ಓಡಿಕೊಂಡು ಬಂದ, ಆಡಿಟೋರಿಯಂಗೆ ... ಹಿಟ್ಲರ್ ಇನ್ನೂ ಕೊರೀತಾನೆ ಇರತಾನೆ, ಪರವಾಗಿಲ್ಲ ಅಂದುಕೊಂಡು. ಆದರೆ ಯಾಕೋ ಏನೋ ಹಿಟ್ಲರ್ ಮಾಮೂಲಾಗಿ ಎರಡು ಘಂಟೇನಾದ್ರೂ ಇರತಾ ಇದ್ದ ತನ್ನ ಭಾಷಣಾನ ಅವತ್ತಿನ ದಿನ ಒಂದು ಘಂಟೇನಲ್ಲೇ ಮುಗಿಸಿಕೊಂಡು Nazi Party Headquarters ಗೆ ಹೊರಟುಹೋಗಿಬಿಟ್ಟಿದ್ದ.

1929ರ ಅವತ್ತಿನ ದಿನ ಆ ನಾಝೀಗೆ ಕಕ್ಕಸ್ಸಿಗೆ ಹೋಗೋ ಆ ಅವಸರ ಬರದೆ ಹೋಗಿದ್ದಿದ್ರೆ ಪ್ರಪಂಚದ ಚರಿತ್ರ ಯಾವರೀತಿ ಬದಲಾಗತಾ ಇತ್ತೋ... ಆಂಡವನೇ ಬಲ್ಲ.

(ನನ್ನ ಕಥೆಗಳನ್ನು ನಾನು ಎಷ್ಟೋ ಸಲ ಬುರುಡೆ ಬಿಟ್ಟಿದ್ದೀನಿ, ಇಲ್ಲ ಅಂತ ಹೇಳೂಲ್ಲ. ಆದರೆ ಇಲ್ಲಿ ನಾನು ಹೇಳಿರೋ ಪ್ರಸಂಗ ನಿಜವಾಗಿ ನಡೆದದ್ದು. ಅನುಮಾನ ಇದ್ದವರು Target Hitler - the plots to kill Hitler - by James P Duffy and Vincent L Ricci (Praeger Publishers, Westport, Connecticut) ಪುಸ್ತಕವನ್ನು ನೋಡಬಹುದು)

ಸಹ-ಖಾರ ಸಭೆ ಸಮಾರಂಭದತ್ತ

• ಎಸ್ಪ್ರಾಮ್ಮೂರ್ತಿ

ಆಗಿರೋದಿಷ್ಟು:

(ರಂಗಣ್ಣ (ಫಿಜಿಕ್ಸ್ ಪ್ರೊಫೆಸರ್, ಟಾಟಾ ಇನ್ಸ್ಟಿಟ್ಯೂಟ್) ಹೆಂಡತಿ ಸರಸೂ ಬಲವಂತದಿಂದಾಗಿ, ಅಕಸ್ಮಾತ್ ಭೇಟಿಯಾದ 'ಐಸ್ಕೂಲ್' ಕ್ಲಾಸ್‌ಮೇಟ್ ತರಲೇ ಗುಂಡನ ಧಾರಾವಾಹಿಯಲ್ಲಿ ಒಂದೇ ದೃಶ್ಯದಲ್ಲಿ ಸ್ವರ್ಗವಾಸಿಯಾಗುವ ಪಾತ್ರ ಮಾಡಿದ. ಟೀವಿ ಚಿತ್ರೀಕರಣ ಸಮಯದಲ್ಲಿ ಗುರುತಾದ ಸನ್ಮಿತ್ರರ ಆಗ್ರಹದಿಂದ ಗಂಡಹೆಂಡಿರಿಬ್ಬರೂ ಸಿಂಧೀ ಸಾಹುಕಾರನ ಕಲಾತ್ಮಕ ಫಿಲಂನಲ್ಲಿ ಪಾತ್ರವಹಿಸುತ್ತಾರೆ. ಆ ಚಿತ್ರ ಪ್ರಶಸ್ತಿಗೆ ಆಯ್ಕೆಯಾಗಿಬಿಡುತ್ತದೆ. ಈ ಮಧ್ಯೆ ಅವಿವೇಕಿ ಗುಂಡ 'ಕೈಚಳಕ' ತೋರಿದ್ದರಿಂದ ರಂಗಣ್ಣನಿಗೆ ಕೋರ್ಟಿನ ದರ್ಶನಲಾಭ ದೊರಕುತ್ತದೆ. ಗುಂಡನ ಚಿತ್ರೀಕರಣಗಳೂ ಸ್ಥಗಿತಗೊಳ್ಳುತ್ತವೆ. ಅವು ರಂಗಣ್ಣನಿಗೆ ಪ್ರಶಸ್ತಿ 'ಪಕ್ಕಾ' ಮಾಡಿಕೊಳ್ಳುವ ವಿಧಾನಗಳನ್ನು ಸೂಚಿಸಿದರೂ ರಂಗಣ್ಣ ಒಪ್ಪುವುದಿಲ್ಲ.)

ಮುಂದಕ್ಕೋದ್ಕಳಿ

ಮುಂದಿನವಾರ ಸರಸೂ ಸಮಾಜದ ಮೆಂಬರಿಗಳ ಆದೇಶದಂತೆ ತಂಬೂರಿ ರತ್ನಮ್ಮ 'ಭುಂಜಿತ ಪಕೋಡ ಶೇಷತೈಲ ವಿಲೇಪಿತ - ಸಂತೇಸುದ್ದಿ'ಯ ಪುಟಗಳನ್ನು ಉದ್ಧರಿಸಲಿಲ್ಲ. ಆದರೆ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಮಾಹಿತಿಗಳನ್ನು ಎಲ್ಲ ದಿನಪತ್ರಿಕೆಗಳೂ ದಪ್ಪಕ್ಷರಗಳಲ್ಲಿ ಮುದ್ರಿಸಿದ್ದವು. ವರ್ಷದ ಅತ್ಯುತ್ತಮ ಚಿತ್ರವೆಂದು ಪರಿಗಣಿತವಾಗಿದ್ದ 'ಅಬಲೆಯರು' ಇನ್ನೂ ಕೆಲವು ಪ್ರಶಸ್ತಿಗಳನ್ನೂ ಗಳಿಸಿಕೊಂಡಿತ್ತು. ಮುಖ್ಯವಾಗಿ ಉತ್ತಮ ನಿರ್ದೇಶನಕ್ಕಾಗಿ ಪಟ್ಟೇ ರಾಮಚಂದ್ರ, ಅತ್ಯುತ್ತಮ ಅಭಿನಯಕ್ಕಾಗಿ ಮಂಜುಳವಾಣಿ ಆಯ್ಕೆಯಾಗಿದ್ದರಲ್ಲದೆ ಅತ್ಯುತ್ತಮ ಪೋಷಕ ನಟ-ನಟಿಯರೆಂದು ಕುಮಾರರಂಗ ಮತ್ತು ಸರಸ್ವತಿ ರಂಗ ಅವರುಗಳನ್ನು ಆಯ್ಕೆ ಮಾಡಲಾಗಿತ್ತು. ಈ ದಂಪತಿಗಳ ನಾಮಪಲ್ಲಟ ಸಮಾಜದ ಸದಸ್ಯೆಯರಿಗೆ ತಿಳಿಯಲು ತಡವಾಗಲಿಲ್ಲ. ಕಾರಣ? ಗುಂಡಣ್ಣ! ... ಗುಂಡಣ್ಣ? ಹೌದು, ಗುಂಡಣ್ಣ. ಆ ಸಂಜೆ ಇಸ್ಪೀಟಾಟಕ್ಕೂ ತಿಲಾಂಜಲಿಯಿತ್ತು ನಾರಿಯರು ನಡೆಸಿದ 'ಸೆಮಿ-ನಾರಿ'ನಲ್ಲಿ ಸತ್ಯ ಬಯಲಾಯಿತು. ಪರಸ್ಪರ ಪ್ರಶ್ನೋತ್ತರಗಳು ಹೀಗೆ ನಡೆದವು:

(ಸೊಟ್ಟ ಮುಸುಡಿ) ಜಯಮ್ಮ: ಅಲ್ಲಾ, ಈ ಸರಸಮ್ಮ ಅವರೆಜಮಾನ್ರು ಹೋಗಿದ್ದು ಟೀವಿ ಸೀರಿಯಲ್ಲಿಗೆ. ಫಿಲಂ ಅವಾರ್ಡು ಹೇಗೆ ಕೊಡ್ತಾರೆ? ಈ ಕು. ರಂಗ ಬೇರೆ ಯಾರೋ ಇರಬೇಕು.

(ತಂಬೂರಿ) ರತ್ನಮ್ಮ: ಹಾಗಾದರೆ ಖಂಡಿತಾನಾ ಪ್ರಶಸ್ತಿ ಬಂದಿರೋದು? ನಾನೂ ಅಂದ್ಕೊಂಡೆ ಒಂದು ಹಾಡು ಹೇಳುಲ್ಲ ಡ್ಯಾನ್ಸ್ ಬರುಲ್ಲ ಇಂಥೋರಿಗೆ ಅದೆಂಥಾ ಅವಾರ್ಡ್ ಕೊಟ್ಟಾರು ಅಂತ.

ಅಚಲಾ ಸತ್ಯದೇವ: ಇವರುಗಳು ಬೇರೆ ಯಾರೂ ಅಲ್ಲ, ನಮ್ಮ ಸರಸಮ್ಮ, ಅವರ ಹಸ್ಬೆಂಡೇಯ... ಒಬ್ರು ಟೀವಿ ಪ್ರಡ್ಯೂಸರ್ ಅಂತೆ ದಂಡೇಶಾನೋ ಏನೋ ಹೆಸರು, ಅವರು ಪೇಪರಿನೋರಿಗೆ ಒಂದು ಹೇಳಿಕೇನೂ ಕೊಟ್ಟಾಗಿದೆ. ಕೊನೇಪೇಜಲ್ಲಿ ಅವರ ಫೋಟೋ ಸಮೇತ ಹಾಕ್ಸಿದಾರೆ ಅಡ್ವರ್ಟೈಸ್‌ಮೆಂಟು.

ಲೀಲಾ ಪುಟ್ಟೀಸ್: ಹಾಗಾರೆ ಸರಸಮ್ಮನ ಫೋಟೋ ಬಂದಿದೆಯಾ ಪೇಪರಲ್ಲಿ?

ಅ. ಸತ್ಯದೇವ: ಸರಸಮ್ಮಂದಲ್ಲ... ಆ ಪ್ರಡ್ಯೂಸರ್‌ದು. ತಾತಾ ಇನ್ಸ್ಟಿಟ್ಯೂಟ್‌ನಲ್ಲಿ ಡಾಕ್ಟರ್ ಆಗಿರುವ ಕುಮಾರ ರಂಗ ಮತ್ತು ಅವರ ಪತ್ನಿ - ಇಬ್ಬರೂ ತಮ್ಮ ಧಾರಾವಾಹಿಗಳಲ್ಲಿ ಪಾರ್ಟ್ ಮಾಡಿ ಅನುಭವ ಪಡೆದು ಈಗ ಫಿಲಂ ಪ್ರಶಸ್ತಿ ತೊಗೊಂಡಿದಾರೆ, ಅದು ತಮಗೆ ಸಂತೋಷ ತಂದಿದೆ ಅಂತ ಹಾಕ್ಸಿದಾರೆ.

ತಂ. ರತ್ನಮ್ಮ: ಹಾಗನ್ನಿಮತ್ತೆ... ಆತ ತುಂಬಾ ಇನ್‌ಫ್ಲುಯೆನ್ಸ್‌ನೋರೇ ಇರ್ಬೇಕು. ಅವಾರ್ಡ್ ಕೊಡಿಸಿದಾರೆ. ಆತ ನಮ್ಮೆಜಮಾನರ ಕ್ಲಾಸ್‌ಮೇಟು ಅಂತ ಸರಸಮ್ಮ ಹೇಳ್ತಿರ್ಲಿಲ್ವೇ?

ಸೊ.ಮು.ಜಯಮ್ಮ: ಬರೀ ಇನ್‌ಫ್ಲುಯೆನ್ಸ್ ನಡೆಯುಲ್ವಂತೇರೀ... ಅವಾರ್ಡ್ ಹಾಕೋವಾಗ... ಕ್ಯಾಷೂ ಕಕ್ಕಬೇಕಂತೆ. ಅವಾರ್ಡ್ ಕೊಟ್ಟಮೇಲೂ ಆ ಚೆಕ್ಕನ್ನ ಸೈನ್ ಹಾಕಿಸಿಕೊಂಡು ಕಿತ್ಕೋತಾರಂತೆ. ಇವರಿಗೂ ಚೆನ್ನಾಗೇ ಎಳೆದಿರಬೇಕು!

ಪ್ರಶಸ್ತಿ ಪ್ರದಾನ ವಿಧಾನಗಳನ್ನು ಜಾಲಾಡಿ ಕಲ್ಮಷಗಳನ್ನು ಕೇಳುಗರ ತಲೆಗೇರಿಸುತ್ತಿದ್ದ ಈ ಡೈಲಾಗುಗಳು ಸೆಕ್ರೆಟರಿ ಜೆಸಿಕಾ ಜಯಕೀರ್ತಿಗೆ ಹಿಡಿಸಲಿಲ್ಲ. ಆಕೆ ತನ್ನ ಗಡುಸುಧ್ವನಿಯೆತ್ತಿ ಈ ಅಸೂಯಾದೇವಿಯರು ಸೃಷ್ಟಿಸುತ್ತಿದ್ದ ವಕ್ರೋಕ್ತಿಗಳನ್ನು ಖಂಡಿಸಿ ಹೇಳಿದಳು: 'ನಮ್ಮ ಸಮಾಜದ ಮೆಂಬರು ಒಬ್ಬರು ಹಾಗೂ ಅವರ ಕುಟುಂಬ ವರ್ಗದವರು - ಅದರಲ್ಲೂ ಆಕೆಯ ಗಂಡನೇ, ಪ್ರಶಸ್ತಿ ಗಳಿಸಿರುವುದು ನಮಗೆಲ್ಲ ಹೆಮ್ಮೆಯ ವಿಷಯವಾಗಬೇಕು. ಅದು ಬಿಟ್ಟು ಯಾವ ಅವಾರ್ಡೂ ತೊಗೊಳೋ ಯೋಗ್ಯತೆ ಇಲ್ಲದ ನಮ್ಮಂಥ - ನಿಮ್ಮಂಥೋರು ಪರಕು ಬಾಯಲ್ಲಿ ಹರಟೋದು ತೀರಾ ಸಣ್ಣ ಬುದ್ಧಿ. ವ್ಯಾಖ್ಯಾನಗಳನ್ನು ಕಟ್ಟಿಟ್ಟು ಆ

ಅವಾರ್ಡ್ ತೊಗೊಂಡಿರೋ ದಂಪತಿಗಳನ್ನು ಹೇಗೆ ಸನ್ಮಾನಿಸಿ ನಮ್ಮ ಗೌರವ ಸೂಚಿಸಬೇಕು ಅಂತ ಯೋಚಿಸಿ''.

ಹೀಗೆ ಮೂತಿ ತಿವಿಸಿಕೊಂಡಮೇಲೆ ನಾ (ಮಾ?)ರೀಮಣಿಯರಲ್ಲಿ ತಮ್ಮ ಮಹಿಳಾ ಸಮಾಜದ ಪ್ರತಿಷ್ಠೆಯ ಕುಡಿ ಮೊಳೆಯುವುದು ತಡವಾಗಲಿಲ್ಲ. ಅವರ ನಾಲಿಗೆಯ ಕಾರುಗಳು ತಕ್ಷಣವೇ ರಿವರ್ಸ್‌ಗೇರಿನಲ್ಲಿ ಓಡತೊಡಗಿದುವು. ಒಂದಾದ ಮೇಲೆ ಒಂದರಂತೆ ಎಂಜಿನ್ನಿನ ಸಿಲಿಂಡರುಗಳು ಶಬ್ದವೇಧಿಗಳನ್ನು ಕುಟ್ಟಿದುವು:

'ಅದ್ಸರಿ ಅನ್ನಿ... ನಮಗೆ ಗೊತ್ತಿರೋ ಇಷ್ಟು ಮಹಿಳಾ ಸಮಾಜಗಳಲ್ಲಿ ಇಂಥಾ ಅವಾರ್ಡ್ ಯಾರು ಗಿಟ್ಸಿದಾರೆ ಅಂತ?'

'ಅದೂ ಒಬ್ಬ ಮೆಂಬರ್ರು ಅವರ ಹಸ್ಬೆಂಡು ಒಟ್ಟಿಗೇನೇ!'

'ಅವರೆಲ್ಲರ ಮುಖ ಮುರಿಯೋಥರ ಅದ್ದೂರಿ ಫಂಕ್ಷನ್ನೇ ಮಾಡಬೇಕು ನಾವು'

'ನೋಡಿ ಹೊಟ್ಟೆ ಉರ್ಕೊಳ್ಳಿ... ಮುಂದಕ್ಕೆ ಪಾಠಾನೂ ಕಲೀಲಿ'

'ಹೌದು, ಸನ್ಮಾನ ಸಮಾರಂಭ ಗ್ರ್ಯಾಂಡಾಗಿರಬೇಕು. ರವೀಂದ್ರ ಕಲಾಕ್ಷೇತ್ರಾನೇ ಬುಕ್ ಮಾಡಿಸಿಬಿಡೋಣಂತೆ'

'ಚೀಫ್ ಗೆಸ್ಟ್ ಯಾರನ್ನ ಕರೆಸೋಣ? ಚೀಫ್ ಮಿನಿಸ್ಟರ್ ಗಿಂತ ಕಮ್ಮಿ ಲೆವೆಲ್ ಶೋಭಿಸುಲ್ಲಮ್ಮ...'

'ಹಾಗಾರೆ ಅವರ ಮಿಸೆಸ್ನೇ ಕರೆದರೆ ಸರಿಯಾಗುತ್ತೆ'

'ಹೌದೂನ್ನಿ... ಅವರಿಬ್ರಲ್ಲಿ ಯಾರೇ ಬಂದ್ರೂ ಅವರ ಬಯೋಡ್ಯಾಟಾ ನಾನೇ ಓದ್ತೀನಿ. ಯಾಕೇಂದ್ರೆ ಅವರ ಮಕ್ಳೂ ನಮ್ಮ ಸ್ಮಿತಾನೂ ಒಂದೇ ಸ್ಕೂಲಿಗೆ ಹೋಗೋದು.'

'ನೀವೇ ಬೇಕಾದರೆ ಓದ್ಕೊಳ್ಳಿ ನಿರ್ಮಲಾ, ಆದರೆ ಮೈಕಿಗೆ ಕೇಳಿಸೋಹಾಗೆ ಓದಿದರೆ ಸ್ವಲ್ಪ ಚೆನ್ನಾಗಿರುತ್ತೆ. ವಾರ್ಷಿಕೋತ್ಸವದಲ್ಲಿ ಪರಿಚಯ ಓದೋಕೆ ಗಂಟ್ಲಿರೋರು ಯಾರೂ ಸಿಗಲಿಲ್ವೇನೇ ಅಂತ ನಮ್ಮೆಜಮಾನರು ರೇಗಿಸಿದರು'

'ನಿಮ್ಮೆಜಮಾನರಿಗೆ ಕಿವುಡು ಅಂತ ಮೊದಲೇ ಗೊತ್ತಿದ್ದಿದ್ರೆ ಅದಕ್ಕೆ ಸರಿಯಾಗಿ ಅರಚಿಕೋತಿದ್ದೆ. ಈ ಸಲ ಹಿಯರಿಂಗ್ ಏಡ್ಸ್ ಹಾಕ್ಕೊಂಡು ಬರೋಕೆ ಹೇಳಿ.'

'ಈ ಏಡ್ಸ್ ಎಲ್ಲಾ ಅಭ್ಯಾಸ ಪಾಪ ನಿಮ್ಮನೆಯೋರಿಗೇ ಇರಬಹುದು. ನೀವು ಮಾತ್ರ ಮೂರು ದಿನ ಮುಂಚೆಯಿಂದಾನೇ ಹಗಲೂರಾತ್ರಿ ಒಂದೊಂದು ಗ್ಲಾಸು

ಬಾದಾಮಿ ಹಾಲು - ಸ್ವಲ್ಪ ದುಡ್ಡು ಖರ್ಚಾದ್ರೂ ಪರ್ವಾಯಿಲ್ಲ - ಕೇಸ್ರಿ ಅಂತಾ ಇರುತ್ತೆ, ಅದನ್ನ ಹಾಕ್ಕೊಂಡು ಕುಡಿತಾ ಬನ್ನಿ'

'ಅಯ್ಯಾ... ಆ ಪರಿಚಯ ಕೇಳಿಸ್ಕೊಳೋರು ಯಾರ್ರೀ ಸುಭದ್ರಮ್ಮ? ಓದ್ಕೊಳ್ಲಿ ಬಿಡಿ ಪಾಪ. ಗಿಫ್ಟು, ಚೀಫ್‌ಗೆಸ್ಟಿಗೆ - ಸನ್ಮಾನಿತರಿಗೆ ತರೋದು ಮಾತ್ರ ಈ ಸಲ ನನ್ನ ಜವಾಬ್ದಾರಿ ಇರಲಿ... ಪಂಕ್ಷನ್ನಿಗೆ ಒಂದು ಮರ್ಯಾದೆ ಬೇಡವೇನ್ರೀ... ಗತಿಯಿಲ್ಲದೋರಥರಾ ಆ ಗೋಪಾಳದ ಪ್ಲಾಸ್ಟಿಕ್ ಟ್ರೇ ಕೊಟ್ರಲ್ಲಾ... ನಾಕು ಕಪೀಬೆರಳು ಬಾಳೆಕಾಯಿಟ್ಟು... ಶುದ್ಧ ಅವಮಾನ!'

'ಓಹೋಹೋಹೋ... ಹೌದ್ಹೌದು, ಜನಾರ್ದನ ಇಂದ ಸಿಲ್ಕ್‌ಸ್ಯಾರೀನೇ ತಂದು ಕೊಡಬೋದಾಗಿತ್ತು, ನೀವುಗಳು ಫಂಡ್‌ರೈಸ್ ಸರಿಯಾಗಿ ಮಾಡಿದ್ದಿದ್ರೆ! ಬಡ್ಜೆಟ್ಟು ಆರು ರೂಪಾಯಿ ಅಂತ ಸ್ಟ್ರಿಕ್ಟಾಗಿ ಯಾಕೆ ಹೇಳಿದಿರಿ ಮತ್ತೆ? ಆ ಹಣಾನೂ ಇನ್ನೂ ನನಗೆ ಸಿಕ್ತಾನೇ ಇದೆ... ನಾನೇ ದುಡ್ಡು ಸುರಿದು ತರೋಹೊತ್ಗೆ ನಿಮ್ಮ ಸನ್ಮಾನ ಒಂದು ಗತಿ ಕಾಣ್ತು?

'ಈ ಸಲ ಸನ್ಮಾನಿತರಿಗೆ, ಚೀಫ್‌ಗೆಸ್ಟಿಗೆ ಅಂತ ಬೇರೆ ಬೇರೆಯೋರೇ ತರೋದು ಒಳ್ಳೇದು. ನಷ್ಟವೋ ಲಾಭವೋ ಒಬ್ಬರಿಗೇ ಆಗುಲ್ಲ.'

'ಈಗ ಒಂದು ವಿಷಯ. ಆ ಸರಸಮ್ಮನ್ನೇ ಕೇಳಿಬಿಡೋದು, ನಿಮಗೂ ನಿಮ್ಮೆಜಮಾನರಿಗೂ ಏನಿಷ್ಟ ಅಂತ'

'ಅವರಿಬ್ರೂ ಇರೋದು ನೋಡಿದರೆ, ಒಬ್ಬರಿಗೊಬ್ಬರು ಇಷ್ಟ ಅಂದುಬಿಡ್ತಾರೆ'

'ಅದಂತೂ ನಂಬೋಕಾಗೊಲ್ಲ ಬಿಡಿ... ಹಾಗಿದ್ದಿದ್ರೆ ಮನೆ ನಂದಗೋಕುಲ ಆಗಿರೋದು'

'ಅಯ್ಯಾ, ಬಿಡಿ... ಸಂತಾನಲಕ್ಷ್ಮಿ ಪ್ರಸನ್ನವಾಗುಕ್ಕೆ ಬರೇ ಹಾಸಿಗೆ ಸೇವೆ ಸಾಲದೂರೀ, ಹಣೇಲೂ ಬರೆದಿರಬೇಕು.'

'ಹೌದಮ್ಮ ಹೌದು... ಆ ಸುವರ್ಣಾನೂ ಅವಳ ಗಂಡಾನೂ ನಾಯಿಗಳ ಥರ ಕಚ್ಚಾಡ್ತಾರೆ. ಆದರೂ ಆರು ಮಕ್ಕಾಗಿಲ್ವೇ?'

'ಇಲ್ದೇ ಇದ್ರೆ ಅವರೆಜಮಾನರಿಗೆ ಗತಿಕಾಣೆಸೋಕೆ ಊರಲ್ಲೆಲ್ಲಾ ಅವರ ಗೋತ್ರದೋರೇ ಹುಟ್ಕೋತಾರಲ್ಲಾ!'

'ಏನೋ ಪಾಪ, ಸರಸಮ್ಮಂಗೆ ಮಕ್ಕಳಿಲ್ಲದ ವ್ಯಥೆ ... ಹೋಗ್ಲಿ, ಇವತ್ತು ಅವರಿಗೆ ಫೋನ್ ಮಾಡಿ ಕಂಗ್ರಾಜುಲೇಟ್ ಮಾಡಬೇಡವೇ?'

'ಹೌದ್ಹೌದು', 'ಹೌದ್ಹೌದು', 'ಹೌದ್ಹೌದು', 'ಹೌ.. ನಿಮ್ಮಗಳ ಹೆಸರಿಂದ ಕನ್‌ಫ್ಯೂಸ್ ಆಯ್ತು, ಬೆಳಿಗ್ಗೇನೆ ಹೇಳ್ಬಿಡ್ತು ಅಂದುಬಿಡೋಣ.'
ಜಯಕೀರ್ತಿಯ ತಾಳ್ಮೆಯ ಕಟ್ಟೆ ಒಡೆಯಿತು. ಅವಳು ಗರ್ಜಿಸಿದಳು:

'ಸೈಲೆನ್ಸ್! ... ಏನಾದರೂ ಕ್ರಿಯೇಟಿವ್ ಆಗಿ ಮಾತಾಡಿ, ಕ್ರಿಮೇಟಿವ್ ಆಗಲ್ಲ. ಇಲ್ಲಿ ಕೇಳ್ಕೊಳಿ. ನಾನು ಬೆಳಿಗ್ಗೆ ಆಕೆಗೆ ಫೋನ್ ಮಾಡಿ ಸಮಾಜದ ಎಲ್ಲ ಮೆಂಬರುಗಳ ಪರವಾಗಿ ಕಂಗ್ರಾಜುಲೇಷನ್ ತಿಳಿಸಿದೀನಿ. ಅಷ್ಟೇ ಅಲ್ಲ, ಅವಾರ್ಡ್ ವಿತರಣೆ ಆದ ದಿನದ ಮುಂದಿನ ಶನಿವಾರ ನಮ್ಮ ಸಮಾಜದಲ್ಲಿ ಸನ್ಮಾನ ಸಮಾರಂಭ ಇಟ್ಕೋತೀವಿ, ಅವತ್ತಿಗೆ ಬೇರೆ ಎಂಗೇಜ್‌ಮೆಂಟ್ ಇಟ್ಟುಕೊಳ್ಳದೆ ಫ್ರೀ ಆಗಿರಿ ಅಂತ ತಿಳಿಸಿ ಕನ್‌ಫರ್ಮೇಷನ್ನೂ ತೊಗೊಂಡಿದೀನಿ. ಇವತ್ತು ಪ್ರೆಸಿಡೆಂಟ್ ಬಂದಮೇಲೆ ಒಂದು ಸ್ಪೆಷಲ್ ಕಮಿಟಿ ಅಪಾಯಿಂಟ್ ಮಾಡಿಸಿ ಜವಾಬ್ದಾರಿ ಹಂಚಿಕೊಳ್ಳೋಣಂತೆ. ಈಗ ಸದ್ಯಕ್ಕೆ ಈ Loose Talk ಬಿಟ್ಟು ಬೇರೆ ಕೆಲಸ ನೋಡಿ.'

'ಜೈ ಜಯಕೀರ್ತಿ!' ಎಂದು ಸಾಧಾರಣ (ಬ್ಯಾಕ್‌ಬೆಂಚ್) ಸದಸ್ಯೆಯರು ಸಮಾಧಾನದ ನಿಟ್ಟುಸಿರೆಳೆದರು.

ಅಂತೂ, 'ಕಡಿವಾಣ ಕಾಣದ ಕುದುರೆಯೋಪಾದಿಯಲ್ಲಿ ಹದಮೀರಿ ಹರಿದ ಹರಿತ ಪದ-ಪ್ರತಿಪದ ಪ್ರಯೋಗಗಳನ್ನು ಅಂತ್ಯಗೊಳಿಸಿ, ಜಯಕೀರ್ತಿಯ ಗದರಿಕೆಯಿಂದ ಮುದುರಿದ ಮನಗಳನ್ನು ಮರಳಿ ಮುದಗೊಳಿಸಿ ರಮಿಸಲು ರಮ್ಮಿಯಾಟಗಳ ರಸಾನುಭವದಲ್ಲಿ ಹರುಷವನ್ನರಸಿದರು, ಹರೆಯವರಿಯದ ರಸಿಕ ರಮಣೀಮಣಿಯರು'.

ಎರಡು ಸುತ್ತು ಎಲೆ ಬಡಿಸಿ, ಬಡಿಯುವಷ್ಟರಲ್ಲೇ ಪ್ರೆಸಿಡೆಂಟ್ ಪರಮೇಶ್ವರಿಯ ಆಗಮನದಿಂದ ಆ ರಸಭಂಗವಾದರೂ, ಸನ್ಮಾನ ಸಮಾರಂಭದ ಸಿದ್ಧತೆಗೆ ನಾಂದಿ ಹಾಕಲು ಎಲ್ಲರೂ ಒಮ್ಮನದಿಂದಲೇ, ತಮ್ಮ ದುಮ್ಮಾನಗಳಾಚೆ ದಯಮಾಡಿ ಸಹಕರಿಸಿ ಚರ್ಚಿಸಿದರು. ಜಯಕೀರ್ತಿಯ ಉತ್ತಮ ಸಾರಥ್ಯದಿಂದ, ಮೀಟಿಂಗು ರಣರಂಗವಾಗದೆ ಸನ್ಮಾನ ಸಮಿತಿ ಸದ್ಭಾವನೆಗಳಿಂದಲೇ ಸಿದ್ಧವಾಯಿತು, ತಮ್ಮ ಸಮಾಜದ ದಿಗ್ವಿಜಯ ಪತಾಕೆಯನ್ನು ಏರಿಸಲು ಸಡಗರದಿಂದ ಸನ್ನದ್ಧವಾಯಿತು.

ಇತ್ತ ರಂಗಣ್ಣನ ಸಾಧನೆ ಸಹೋದ್ಯೋಗಿಗಳಿಂದ ಮಿಶ್ರ ಪ್ರತಿಕ್ರಿಯೆ ಪಡೆಯಿತು. ಕೆಲವರು ಹೃತ್ಪೂರ್ವಕವಾಗಿ ರಂಗಣ್ಣನನ್ನು ಅಭಿನಂದಿಸಿ ಅವರ

ಸುಪ್ತಪ್ರತಿಭೆಯನ್ನು ಮುಕ್ತವಾಗಿ ಹೊಗಳಿದರು. ಹಲವರು ಅಸೂಯಾಪರ ಅಸಡ್ಡೆಯಿಂದ ಮೂಗು ಮುರಿದರು. ಅವರೆಲ್ಲರ ಭಾವನೆಗಳನ್ನು ಮನವರಿಸಿಕೊಳ್ಳುವ ಒಂದು ಅವಕಾಶ ಅವನಿಗೆ ಒದಗಿ ಬಂತು.

ಮೆಟಲರ್ಜಿ ವಿಭಾಗದ ಮುಖ್ಯಸ್ಥ ಡಾ|| ಹರ್‌ಭಜನ್ ಸಿಂಗ್ ಅವರು, ಪ್ರಶಸ್ತಿಯ ಹಿರಿಮೆಯನ್ನು ತಲೆಗೇರಿಸಿಕೊಳ್ಳದೆ ಕಾರ್ಯನಿರತನಾಗಿದ್ದ ರಂಗಣ್ಣನಿಗೆ ಕರೆ ಕಳುಹಿಸಿದರು. ತನ್ನ ಕೋಣೆಗೆ ಬಂದ ಅವನನ್ನು 'ಹಾಬಿಯಾಗಿ ಬೆಳೆಸಿಕೊಂಡು ಪ್ರಶಸ್ತಿ ಗಳಿಸುವ ಮಟ್ಟ ತಲುಪಿದ್ದಕ್ಕಾಗಿ' ಅಭಿನಂದಿಸಿದರು. ಜೊತೆಗೇ Ministry of Science and Technology ಇಂದ ಬಂದಿದ್ದ ಪತ್ರವೊಂದನ್ನು ಅವನಿಗಿತ್ತರು.

ಪತ್ರವನ್ನೋದಿದ ರಂಗಣ್ಣ ಪ್ರಶ್ನಾರ್ಥಕವಾಗಿ ಸಿಂಗ್ ಅವರತ್ತ ನೋಡಿದ.

★★★

ಚುನಾವಣೆ

ಗೊಟಾಲಗಳ ಸಮಸ್ಯೆ
ಹಿಂದೂತ್ವದ ರಹಸ್ಯ
ಗನ್ನುಗಳ ಕೊಳ್ಳಾಟ
ದೇಸೀ ಬೇಟಿ, ವಿದೇಶಿ ಬಹೂ
ಇವರುಗಳ ಸೆಣಸಾಟ
ಯಾರಿಗೆ ಬೇಕು ಈ ಕಾಟ
ಹೊಟ್ಟೆಗಿಲ್ಲದ ದೇಶದ ಜುಟ್ಟಿಗೆ
ಮಲ್ಲಿಗೆಯ ಮುಡಿಸಾಟ

– ಕಮಲಾ ರಾಮಸ್ವಾಮಿ

ಖಾಸ್ (ಬಿಸಿಬೇಳೆ) ಬಾತ್

• ಇಸ್ಮಾಯಿಲ್

ಹಾಸ್ಯೋತ್ಸವ 2ಕೆ2 ಯಶಸ್ವಿ ಮುಕ್ತಾಯವಾಗುತ್ತಿದ್ದಂತೆ ಸಂಘಟಕರನ್ನೆಲ್ಲಾ ಒಂದು ಕಡೆ ಕಟ್ಟಾಕಿ ಫಲಾಹಾರ ಕೈಂಕರ್ಯವನ್ನು ದಾಶರಥಿ ದೀಕ್ಷಿತ ಮನೆಯವರು ಕೈಗೊಂಡರು. ಇನ್‌ಫ್ಯಾಕ್ಟ್ ಲೋಡಿಗೆ (ಲೋಕನಾಥ ದೀಕ್ಷಿತರಿಗೆ) ಹಾಸ್ಯೋತ್ಸವದ ದಿನವೇ (ರಾತ್ರಿಯೇ) ತಮ್ಮ ಮನೆಯಲ್ಲಿ ಕೆಲವರಿಗೆ ಊಟ ಹಾಕುವ ಅಪೇಕ್ಷೆಯಿತ್ತು. ಕೃಷ್ಣಸುಬ್ಬರಾವ್ ಅವನಾಸೆಗೆ ತಣ್ಣೀರು ಎರಚಿ ''ನಾವೆಲ್ಲಾ ಅವತ್ತು ಸುಸ್ತಾಗಿರುತ್ತೇವೆ. ಇನ್ನೊಂದು ದಿನ ಏರ್ಪಾಟು ಮಾಡು. ಅದೂ ಅಲ್ಲದೆ ಕಾರ್ಯಕರ್ತರೆಲ್ಲ ಪ್ರತಿವರ್ಷ ದೋಸೆ ಕ್ಯಾಂಪ್‌ನಲ್ಲಿ ಅವರೆಕಾಯಿ ದೋಸೆ, ಕ್ಯಾಪ್ಸಿಕಮ್, ಮೆಂತ್ಯದ ದೋಸೆ ತಿನ್ನುವ ಆಸೆ ಇಟ್ಟುಕೊಂಡಿರುತ್ತಾರೆ. ಅವರ ಹೊಟ್ಟೆಮೇಲೆ ಹೊಡೆಯಬೇಡ'' ಎಂದು ತಮ್ಮ ತಣ್ಣೀರು ಎರಚುವಿಕೆಗೆ ಸಮಜಾಯಿಶಿ ಕೊಟ್ಟರು.

ಗಾಂಪರ ಗೊಗ್ಗರುವಿನ ಇಷ್ಟದಂತೆ ಗುರುವಾರ 2ನೇ ಜನವರಿ ಫಲಾಹಾರದೊಂದಿಗೆ ಹೊಸ ವರ್ಷದ ಶುಭಾಶಯಗಳು ಕೈಯಿಂದ ಕೈಗೆ ವರ್ಗವಾಯಿತು. ದಾಶರಥಿಯವರ ಒಡನಾಡಿ ಎಸ್. ಎನ್. ಶಿವಸ್ವಾಮಿ ಎಲ್ಲರಿಗಿಂತ ಮುಂಚೆ ಬಂದು ಕೂತಿದ್ದು ಅವರ ಸ್ನೇಹವನ್ನು ಸ್ಪಷ್ಟಪಡಿಸುತ್ತಿತ್ತು. ಅವರು ಹಿಂದೊಮ್ಮೆ ದಾಶರಥಿ ಮನೆಗೆ ಹೋದಾಗ ಕೆಳಗಿದ್ದ ಫೋಟೋ ಸ್ಟುಡಿಯೋದಲ್ಲಿ ಫೋಟೋ ತೆಗೆಸಿ ಮತ್ತೆ ಪಕೋಡಕ್ಕಾಗಿ ಮನೆ ಪ್ರವೇಶ ಮಾಡಿದ ಫ್ಲಾಶ್ ಬ್ಯಾಕ್‌ನಲ್ಲಿ ನಿರತರಾಗಿದ್ದು ಕಾಣಿಸುತ್ತಿತ್ತು. ಅ.ರಾ. ಮಿತ್ರ, ಅಪರಂಜಿ ಶಿವು ಹಾಸ್ಯಬ್ರಹ್ಮದ ಗೆಳೆಯರೊಡನೆ ಸೇರಿಕೊಂಡರು. ಅಡಿಗೆಮನೆಯಲ್ಲಿ ಲೋಕುವಿನ 'ಕೈವಾಡ' ವಿಲ್ಲವೆಂಬ ಆಶ್ವಾಸನೆ ಪಡೆದುಕೊಂಡು ಅ.ರಾ. ಮಿತ್ರ ಅವರು ''ಹಾಗಾದರೆ ಫಲಾಹಾರ ಸೇವೆ ಶುರುವಾಗಲಿ'' ಎಂದು ಹಸಿರು ನಿಶಾನೆ ತೋರಿಸಿದರು. ಕಲಾವಿದ ಎಂ. ಪಿ. ವೆಂಕಟರಾವ್ ಪತ್ನೀಸಮೇತರಾಗಿ ಬಂದಿಳಿದಾಗ ಅವರನ್ನು 'ಜಾನಕೀರಮಣ' ಎಂದು ಮಿತ್ರ ಅವರು ಕೀಟಾಯಿಸಿದರು. (ವೆಂಕಟರಾವ್ ಪತ್ನಿ ಹೆಸರು ಜಾನಕಿ) ''ಈ ಹಾಡಿಗೆ ಸೋತೇ ನಾನು ಮದ್ವೆ ಆಗಿ 28 ವರ್ಷದಿಂದ ಕಷ್ಟ...'' ವಾಕ್ಯಪೂರ್ತಿ ಮಾಡಲಾಗದೆ ಬಿಸಿಬೇಳೆಭಾತ್ ತಟ್ಟೆಗಳಿಗೆ ಜಾಗ ಮಾಡಿಕೊಟ್ಟರು.

ಹಾಸ್ಯೋತ್ಸವದ ಇನ್ನೂ ಮುಗಿಯದ ಕೆಲ್ಸಗಳನ್ನು ಬೇಲೂರು ಬಿಸಿಯಾಗಿ ಮಾಡುತ್ತಿದ್ದರು. ಫೋಟೋಗ್ರಾಫರ್‌ಗೆ ವೇದಿಕೆಯ ಮೇಲೆ ಸ್ಮರಣಫಲಕ ಕೊಡಲಿಲ್ಲವೆಂದು ಶ್ರೀಮತಿ ದಮಯಂತಿ ದೀಕ್ಷಿತರ ಕೈಲಿ ಕೊಡಿಸಿದರು. ವಿಶ್ವ(ಸ್ಟಿಲ್ ಫೋಟೋಗ್ರಾಫರ್) ಬಲು ಎತ್ತರದ ಆಸಾಮಿ. ಅವನನ್ನು ಬಗ್ಗಿಸಲು ಎಷ್ಟು ಪ್ರಯತ್ನಪಟ್ಟರೂ ಆಗದೇ ಕಡೆಗೆ ಹೇಗೋ ಫೋಟೋ ತೆಗೆದಾಯಿತು. ವಿಶ್ವ ಬರಲು ಸ್ವಲ್ಪ ತಡಮಾಡಿದ. ಮೊದಲು ಕ್ರಾಸ್ ತಪ್ಪಿಸಿಕೊಂಡ ನಂತರ ಪಕ್ಕದ್ಮನೆಗೆ ನುಗ್ಗಿದ. ಅಲ್ಲೂ ಏನೋ ಕಾರ್ಯಕ್ರಮವಿತ್ತು. ಬಗಲಲ್ಲಿ ಕ್ಯಾಮರ ಇದ್ದಿದ್ದರಿಂದ ಅವರ ಮನೆಯಲ್ಲೂ ಅಭೂತ ಸ್ವಾಗತ. ಒಂದು ಪರಿಚಯದ ಮುಖ ಕಾಣದೆ ಕಂಗಾಲಾಗಿ ಮೆಟ್ಟಲು ಸರಸರನೆ ಇಳಿದು ಇನ್ನೊಂದು ಮಹಡಿ ಮೆಟ್ಟಲನ್ನು ಹತ್ತಿಬಂದು ಉಸ್ಸಪ್ಪ ಅಂತ ಸೋಫಾದಲ್ಲಿ ಕುಳಿತ.

ಗ್ರೂಪ್ ಫೋಟೋ ಬಹಳ ಪ್ರಯಾಸವಾಯ್ತು. ಸ್ಥಳ ಸಂಕೋಚವಾಗಿರುವಾಗ ಗೋಪಾಲಕೃಷ್ಣನಂತಹ ಆಕೃತಿಗೆ ಜಾಗ ಮಾಡುವುದು ಕಷ್ಟ. ಆದರೂ ಹೇಗೋ ಗೌತಮ, ಸೂರಿ, ವೈ.ಎನ್. ಗುಂಡೂ ಫ್ರೇಮ್‌ನಲ್ಲಿ ತೂರಿದರು. ಈ ಸಮಸ್ಯೆ ಬರುತ್ತದೆ ಎಂದು ಮೊದಲೇ ಊಹಿಸಿ ವೈ.ವಿ. ಗುಂಡೂ(ದಿ ಅದರ್ ಗುಂಡೂ ಇನ್ ಹಾಸ್ಯಬ್ರಹ್ಮ) ಎಲ್ಲಾ ಮುಗಿದಮೇಲೆ ಬಂತು. ಅಂತೂ ಫಲಾಹಾರ ಕಾರ್ಯಕ್ರಮ ಅಚ್ಚುಕಟ್ಟಾಗಿತ್ತು.



AK-47 ಪಾದಾರವಿಂದಕ್ಕೆ

• ಬಿ.ಆರ್. ನಾಗೇಶ್

ಪ್ರಿಯ ಎ.ಕೆ.ಯವರೆ,

ಈ ಪತ್ರ ನಿಮಗೆ ತಲುಪಿಯೆ ತಲುಪುತ್ತದೆ ಎಂಬುದು ನನಗೆ ಖಂಡಿತವಾಗಿಯೂ ಗೊತ್ತು. ಪ್ರಪಂಚದ ಎಲ್ಲಾ ಭಾಗಗಳಲ್ಲಿ ನಿಮ್ಮ ಗುರುತಿನವರು ಇರುವಾಗ, ಅಂಚೆ ಇಲಾಖೆಯವರಿಗೆ ನಿಮ್ಮ ವಿಳಾಸ ಗೊತ್ತಿಲ್ಲದೆ ಹೋಗಲು ಸಾಧ್ಯವೇ ಇಲ್ಲ. ನಿಮ್ಮ ಕಾರ್ಯವ್ಯಾಪ್ತಿ, ಕರ್ತವ್ಯ ಪ್ರಜ್ಞೆ - ಸದ್ಯ ಬೆಂಗಳೂರಿನ ತನಕವೂ ಹರಿದುಬಂದಿರುವುದು ನಮ್ಮ ಪುಣ್ಯ ವಿಶೇಷ. ಈ ಕಾಗದ ಮಾರ್ಗದ ಬದಿಯಲ್ಲಿ ಬಿದ್ದಿರಲಿ, ಮಧ್ಯದಲ್ಲಿ ಬಿದ್ದಿರಲಿ, ಚರಂಡಿಯಲ್ಲಿ ಬಿದ್ದಿರಲಿ - ಎಲ್ಲಿ ಬಿದ್ದಿರುವುದಾದರೂ ನಿಮಗೆ ತಲುಪಿಯೇ ತಲುಪುತ್ತದೆ. ಹಾಗಾಗಿ ವಿಳಾಸದಲ್ಲಿ ನಿಮ್ಮ ಆಯುಧದ ಹೆಸರನ್ನೂ, ಬೆಂಗಳೂರು - ಎಂದು ಬರೆದಿರುತ್ತೇನೆ. ಈ ಪತ್ರವನ್ನು ಮನುಷ್ಯರಾಗಿರುವ ಬೇರೆ ಯಾರೂ ಮುಟ್ಟುವುದಿಲ್ಲ - ಎಂಬ ಧೈರ್ಯ ನನಗಿರುವುದರಿಂದ, ಇದಕ್ಕೆ ಅಂಚೆಚೀಟಿಯನ್ನೂ ಅಂಟಿಸಿಲ್ಲ.

ಭೂಭಾರ ಕಡಿಮೆ ಮಾಡಲು ಪಣತೊಟ್ಟಿರುವ ನೀವು ಬೆಂಗಳೂರಿಗೆ ಬಂದಿರುವುದು ಅಂತರ್‌ರಾಷ್ಟ್ರೀಯ ಖ್ಯಾತಿಯನ್ನು ಇದಾಗಲೇ ಪಡೆದಿರುತ್ತದೆ. ಹಿಂದೆ ಪರಮಾತ್ಮ ಭೂಭಾರ ಇಳಿಸುವುದಕ್ಕಾಗಿ ಆಗಾಗ ಬೇರೆ ಬೇರೆ ಅವತಾರಗಳನ್ನು ಎತ್ತುತ್ತಿದ್ದ. ಆದರೆ ತನ್ನ ಅವತಾರ ಕ್ರಿಯೆ ಈ ಶತಮಾನಕ್ಕೆ ಒಗ್ಗುವುದಿಲ್ಲವೆಂದು ಪರಮಾತ್ಮನಿಗೂ ತಿಳಿದಿದೆ; ಹಾಗಾಗಿ ಸದ್ಯ ಆತ ವಿರಾಮ ಸ್ಥಿತಿಯಲ್ಲಿರುವಾಗ, ನಿಜಕ್ಕೂ ಜನಸಂಖ್ಯೆಯ ಸ್ಫೋಟದಿಂದ ಭಾರತದ ಭೂಭಾರ ಹೆಚ್ಚಾಗುತ್ತಿರುವುದು ಕಡುಮೂರ್ಖನಿಗೂ 'ಕಾಣಿಸುವ' ಅಂಶವಾಗಿರುವುದರಿಂದ, ನಿಮ್ಮಂಥ ಭಯೋತ್ಪಾದಕರು ಬರಲೇಬೇಕಾದ ಸಂದರ್ಭ ಒದಗಿದೆ.

ನೀವು ಭಾರತದ ಉತ್ತರ ಭಾಗದಲ್ಲಿ ಮಾತ್ರ ಚಟುವಟಿಕೆಗಳನ್ನು ತೋರಿಸುತ್ತಿದ್ದವರು, ಈಗ ದಕ್ಷಿಣಕ್ಕೆ ಇಳಿದದ್ದು - ಭೂಭಾರದಲ್ಲಿ ಸಮತೋಲವನ್ನು ನಿರ್ಮಿಸುವುದಕ್ಕಾಗಿ ಮಾತ್ರ - ಎಂದು ನಾವು ಬುದ್ಧಿಜೀವಿಗಳು ತಿಳಿದಿದ್ದೇವೆ. ಉತ್ತರ ಭಾರತದಲ್ಲಿ ನೀವು ಈ ಪವಿತ್ರ ಕಾರ್ಯವನ್ನು ದಶಕಗಳಿಂದ ಮಾಡುತ್ತಿರುವಿರಿ. ಇದರಿಂದಾಗಿ ಉತ್ತರ ಭಾರತದ ಭೂಭಾರ ಕಡಿಮೆಯಾಗಿರಬೇಕು - ದಕ್ಷಿಣ ಭಾರತದ ಭೂಭಾರ ಹೆಚ್ಚಾಗಿರಬೇಕು. ಉತ್ತರ

ಮತ್ತು ದಕ್ಷಿಣ ಭಾರತಗಳ ಭಾರ ಒಂದೇ ರೀತಿ ತೂಗಬೇಕೆಂಬ ಯೋಜನೆ ನಿಮ್ಮದು. ಅದಕ್ಕಾಗಿ ದಕ್ಷಿಣಕ್ಕೆ ಈಗ ಪ್ರಯಾಣ. ನಿಮ್ಮ ಈ ಕಾರ್ಯವ್ಯಾಪ್ತಿಯನ್ನು ಜಲಚರ ಪ್ರಾಣಿಗಳಿಂದ ಹಿಡಿದು, ಮಂಗ, ಗೋರಿಲ್ಲಾ, ಚಿಂಪಾಂಜಿಗಳೂ ಮೆಚ್ಚುವಂತಿವೆ - ಅವುಗಳ ಮೆಚ್ಚುಗೆಯ ಎದುರು, ಮನುಷ್ಯರಾದ ನಮ್ಮ ಮೆಚ್ಚುಗೆ ಎಷ್ಟರದ್ದು?

ನೀವು ಜನರನ್ನು ಸಂಹರಿಸುವ ರೀತಿಯನ್ನು ನಿರಕ್ಷರಕುಕ್ಷಿಗಳು, ಬಡವರು, ಹೆಂಗಸರು, ಮಕ್ಕಳು ಬಹಳವಾಗಿ ಮೆಚ್ಚಿಕೊಳ್ಳುವುದರಿಂದಲೇ, ಅವರ ಕಡೆಗೆ ನಿಮ್ಮ ಗುರಿ ಇರುತ್ತದೆ. ಆದರೆ ದಕ್ಷಿಣದಲ್ಲಿ ಹಾಗಾಗಲಾರದು. ಇಲ್ಲಿಯ ಜನ ಓದಿದವರು-ಎಲ್ಲವನ್ನೂ ಇಂಗ್ಲಿಷ್‌ನಲ್ಲಿಯೇ ತೋಡಿಕೊಳ್ಳುವವರು. ಇಂಗ್ಲಿಷ್ ಅಂತರ್‌ರಾಷ್ಟ್ರೀಯ ಭಾಷೆ - ಹಾಗಾಗಿ ಬೆಂಗಳೂರಿನ ಒಬ್ಬಾತನನ್ನು ನೀವು ಹರಾಹರಾ ಮಾಡಿದರೆ ಅಂತರ್‌ರಾಷ್ಟ್ರೀಯ ಸಮುದಾಯದ ಸಾವಿರ ಜನರನ್ನು ಸ್ವರ್ಗಕ್ಕೆ ಕಳುಹಿಸಿದ ಪುಣ್ಯ ನಿಮಗೆ ಸಿಗುತ್ತದೆ.

ನೀವು ಹೆಂಗಸರು, ಮಕ್ಕಳನ್ನು ಪರಕ್ಕೆ ಕಳುಹಿಸುವುದರಲ್ಲಿ ಬಹಳ ಬುದ್ಧಿವಂತರು. ಹೆಂಗಸರನ್ನು ಕೊಲ್ಲುವುದು ಸುಲಭದ ಕೆಲಸವೇನಲ್ಲ! ಅದರಲ್ಲಿಯೂ ನೀವು ಯಸಸ್ಸು ಗಳಿಸಿದ್ದೀರಿ. ದೇವರಂತಿರುವ ಮಕ್ಕಳನ್ನೂ ಕೊಂದಿರುತ್ತೀರಿ. ದೇವರ ಅವತಾರವಾದ ನೀವು ನಿಮ್ಮ ಮಕ್ಕಳನ್ನೇ ಕೊಲ್ಲುವುದರ ಹಿಂದೆ ಯಾವ ತರ್ಕ ಇದ್ದೀತು-ಎಂದು ಬುದ್ಧಿಜೀವಿಗಳಿಗೂ ಅರ್ಥವಾಗದು.

ಮೇಲಾಗಿ ನೀವು ಆಯಾಯ ದಿನಕ್ಕೆ ಇಷ್ಟಿಷ್ಟು ಜನರನ್ನು ಪರಕ್ಕೆ ಕಳುಹಿಸಲು ನಿಶ್ಚಯಿಸಿಕೊಂಡಿರುತ್ತೀರಿ - ಒಂದು ರೀತಿಯ ಕೋಟಾ ನಿಮ್ಮ ಕ್ರಿಯೆಯಲ್ಲಿ ಕಾಣಿಸುತ್ತದೆ. ಅದಕ್ಕೂ ಮಿಗಿಲಾಗಿ, ನಿಮ್ಮ ದಿನದ ಕೋಟಾ ಮುಗಿದೊಡನೆಯೆ, ನೀವೂ ಹುತಾತ್ಮರಾಗುತ್ತೀರಿ. ಭೂಭಾರ ಇಳಿಸುವವರು ಈ ರೀತಿ ಹುತಾತ್ಮರು ಆಗಬಾರದು. ಅದಕ್ಕಾಗಿ ಈ ಕೆಳಗಿನ ಸೂಚನೆಗಳನ್ನು ನಿಮ್ಮ ಮುಂದಿಡುತ್ತೇನೆ.

1. ಸಾಯಲು ಸಿದ್ಧರಿಲ್ಲದವರನ್ನು ಕೊಂದು ನೀವು ನರಕಕ್ಕೆ ಹೋಗುವ ಬದಲು, ಸಾಯಲು ಸಿದ್ಧರಿರುವವರನ್ನೇ ಕೊಂದು ಸ್ವರ್ಗಕ್ಕೆ ಹೋಗುವುದು ಒಳ್ಳೆಯದಲ್ಲವೇ?

2. ಸಾಯಲು ಸಿದ್ಧರಿರುವವರು ಯಾರು ಎಂದು ನಿಮಗೆ ಹುಡುಕಲು ಕಷ್ಟವಾದೀತು. ಈ ರೀತಿಯ ಕಷ್ಟಗಳು, ಅತ್ಯಂತ ಜರೂರಾಗಿ ಆಗಬೇಕಾಗಿರುವ ನಿಮ್ಮ ರೀತಿಯ ಕ್ರಿಯೆಗಳಿಗೆ, ಎದುರಾಗಬಾರದು. ಅದಕ್ಕಾಗಿ ನಾನೊಂದು ಲಿಸ್ಟ್ ತಯಾರಿಸಿದ್ದೇನೆ. ಈ ಲಿಸ್ಟ್‌ನಲ್ಲಿ ಇರುವವರೆಲ್ಲರೂ ಸಾಯಲು ಸಿದ್ಧರಾಗಿರುವವರು. ಈ ಲಿಸ್ಟ್‌ನಲ್ಲಿ ಪ್ರಥಮ ಕಂತಿನಲ್ಲಿ ಬರುವ ನೂರು ಜನರು ಇದ್ದಾರೆ.

3. ಈ ನೂರು ಜನರಲ್ಲಿ ಅರುವತ್ತೈದು ಜನರು ತಮ್ಮ ತಮ್ಮ ಹೆಂಡತಿಯರಿಂದ ಸರ್ವಕಾಲವೂ ಹಿಂಸೆಗೆ ಒಳಗಾಗಿ, ಕಿವಿ-ಮೂಗು-ಕಣ್ಣುಗಳ ಎಲ್ಲಾ ಇಂದ್ರಿಕ ಶಕ್ತಿಗಳನ್ನು ಕಳೆದುಕೊಂಡವರು. ನಾಲಗೆಗೆ ರುಚಿ ಇಲ್ಲದವರು. ತಮ್ಮ ಎಡಕೈ ಮೇಲೆ ಸೊಳ್ಳೆ ಬಂದು ಕುಳಿತು ರಕ್ತ ಹೀರಿದರೂ, ಅದನ್ನು ಅಪ್ಪಚ್ಚಿ ಮಾಡಲು ಮನಸ್ಸು ಇಲ್ಲದವರು - ಧೈರ್ಯ ಇಲ್ಲದವರು.

4. ಹದಿನೆಂಟು ಜನರು ನಿರುದ್ಯೋಗಿಗಳು, ಡಿಗ್ರಿ ಇದ್ದರೂ ಕೆಲಸ ಸಿಗದೆ ಇಲ್ಲಿರುವ ಹಲವಾರು ಪಾರ್ಕ್‌ಗಳಲ್ಲಿ, ಲೈಬ್ರರಿಗಳಲ್ಲಿ ದಿನದ ಬಹು ಹೊತ್ತನ್ನು ಕಳೆಯುವವರು. ಸಾಧ್ಯವಾದರೆ, ಹತ್ತು ರೂಪಾಯಿ ಸಿಕ್ಕಿದರೆ, ಯಾವ ರಾಜಕೀಯ ಪಕ್ಷದ ಸಭೆಗೂ ಹಾಜರಿ ಆಗುವವರು-ಜೈಕಾರ ಹಾಕುವವರು-ಬಂದ್ ಸಮಯದಲ್ಲಿ ಕಂಟ್ರಾಟು ಮೇಲೆ ಕಟ್ಟಡಗಳ ಗಾಜು ಒಡೆಯುವವರು, ದಿನಕ್ಕೊಮ್ಮೆ ತಮ್ಮ ತಮ್ಮ ಉಪಹಾರ ಗೃಹಗಳಿಗೆ (ಎಂದರೆ ಮನೆಗಳಿಗೆ ತೆರಳಿ) ಊಟ ಮಾಡುವವರು. ಯಾರು ಯಾರದೋ ದುಡ್ಡಿನಲ್ಲಿ ಪ್ರೇಮಮಯ ಸಿನೆಮಾ ನೋಡುವವರು.

5. ಇನ್ನು ಉಳಿದ ಐದು ಜನರು, ಹೇಳಲು ನಾಚಿಗೆ ಆಗುತ್ತದೆ. ಆದರೂ ಸತ್ಯಸಂಗತಿ ಆದುದರಿಂದ ಹೇಳಲೇಬೇಕು-ಪ್ರೇಮಿಗಳು. ಇವರೆಲ್ಲಾ ಗಂಡಸರೇ. ಪ್ರೇಮಿಗಳಲ್ಲಿ ಗಂಡಸರೇ ಆತ್ಮಹತ್ಯೆ ಮಾಡಿಕೊಳ್ಳುವುದು ಹೆಚ್ಚು ಎಂದು ಲೋಕಕ್ಕೆಯೇ ತಿಳಿದ ವಿಚಾರ. ಹೀಗೆ ಗಂಡು ಪ್ರೇಮಿ ಆತ್ಮಹತ್ಯೆ ಮಾಡಿಕೊಂಡೊಡನೆಯೆ ಹೆಣ್ಣು ಪ್ರೇಮಿ ಬೇರೆ ಮದುವೆಯಾಗುವುದು ಲೋಕರೂಢಿ.

6. ಇನ್ನುಳಿದ ಹತ್ತು ಜನರಲ್ಲಿ ಐವರು ಪರೀಕ್ಷೆಗಳಲ್ಲಿ ಫೇಲ್ ಆದವರು; ಇವರಲ್ಲಿ ಸಪ್ಲಿಮೆಂಟರಿ ಪರೀಕ್ಷೆಯ ಮೊದಲೇ ಸಾಯಬೇಕಾದ ತವಕ ಇದೆ. ಮೂರು ಜನ ಫೈನಾನ್ಸ್ ಕಂಪೆನಿ ಮಾಡಿ ಮುಳುಗಿದವರು. ಒಬ್ಬರು ರಾಜಕಾರಣಿ. ಒಮ್ಮೆ ಮಂತ್ರಿಯಾಗಬೇಕು ಎಂಬ ಆಸೆಯಿಂದ ಅಧಿಕಾರದಲ್ಲಿರುವ ಯಾವ ಪಕ್ಷಕ್ಕಾದರೂ ಪಕ್ಷಾಂತರ ಮಾಡಿ ಸೋತು ಹೋದವರು - ಮಂತ್ರಿ ಆಗದೆ ಉಳಿದವರು.

ಸಾಯಲು ಸಿದ್ಧರಾಗಿರುವ ಹೆಂಗಸರು ಇದ್ದಾರೆಯೇ ಎಂದು ತಿಳಿಯಲು ಬಹಳಷ್ಟು ಪ್ರಯತ್ನ ಮಾಡಿದೆ - ಯಾವ ಹೆಂಗಸೂ ಮುಂದೆ ಬರಲಿಲ್ಲ. ಮೊಲೆ ಬತ್ತಿ ಹೋದ ಮುದುಕಿಯರಿಂದ ಹಿಡಿದು, ಈಗಷ್ಟೇ ಜೀನ್ಸ್-ಟೀಶರ್ಟ್ ಹಾಕಲು ಪ್ರಾರಂಭಿಸಿದವರ ತನಕವೂ ವಿಚಾರಿಸಿದೆ. ಯಾರೂ ಒಪ್ಪಲಿಲ್ಲ. ನಾನು ಹೆಂಗಸರ ಬೇಟೆಗೆ ಹೊರಟ ಮುಖ್ಯ ಕಾರಣ - ನಿಮಗೆ ಹೆಂಗಸರನ್ನು ಕೊಲ್ಲುವುದೆಂದರೆ ಬಹಳ ಪ್ರೀತಿ ಎಂದು ತಿಳಿದಿರುವುದು.

ನಾನು ಈ ನೂರು ಜನರ ಪಟ್ಟಿ ತಯಾರಿಸಿರುತ್ತೇನೆ. ಇವರೆಲ್ಲರೂ ಭೂಭಾರ ಹೆಚ್ಚಿಸಲೆಂದೇ ಇನ್ನೂ ಬದುಕಿ ಉಳಿದವರು. ಇವರನ್ನು ಅವ್ಯವಸ್ಥಿತ ರೀತಿಯಲ್ಲಿ ನೀವು ಕೊಲ್ಲಬಾರದು. ಇದರಿಂದ ಅವರಿಗೂ ಅವಮಾನ, ನಿಮಗೂ ಅಪಕೀರ್ತಿ. ಮೇಲಾಗಿ ನೀವು ರಾತ್ರಿಯ ಸಮಯ, ಯಾರುಯಾರದೋ ಮನೆಯೊಳಗೆ ನುಗ್ಗಿ ಎ.ಕೆ.-47ರಿಂದ ಜನರನ್ನು ಕೊಲ್ಲಬೇಕಾಗಿ ಇಲ್ಲ. ಹಗಲು ಹೊತ್ತಿನಲ್ಲಿಯೇ ರಾಜಾರೋಷವಾಗಿ ಈ ನೂರುಜನರನ್ನು ಎ.ಕೆ.-47ರಿಂದಲೇ ಕೊಲ್ಲಲು ಬೇಕಾದ ಏರ್ಪಾಡನ್ನು ಮಾಡಿದ್ದೇನೆ.

ಬೆಂಗಳೂರಿನಲ್ಲಿ ಹಲವಾರು ಆಟದ ಮೈದಾನಗಳಿವೆ. ಅವುಗಳಲ್ಲಿ ಸದಾಶಿವನಗರದ ಆಟದ ಮೈದಾನ ಚೆನ್ನಾಗಿದೆ. ಆ ಮೈದಾನಿನಲ್ಲಿ ಕಾಲು-ಅರ್ಧ ತಯಾರಾಗುತ್ತಿರುವ ತೆಂಡೂಲ್ಕರ್ ಇರುತ್ತಾರೆ, ಕ್ರಿಕೆಟ್ ಆಡುವುದಕ್ಕಿಂತ ಹೆಚ್ಚು ಬೊಬ್ಬೆ ಹೊಡೆಯುತ್ತಾರೆ. ಇದಕ್ಕೆ ತಾಗಿ ಇರುವ ತೋಟದಲ್ಲಿ ನಿವೃತ್ತರು, ಹಲ್ಲಿಲ್ಲದವರು, ನಾಲಗೆ ಮಾತ್ರ ಇರುವವರು, ಕೈಕಾಲುಗಳಿಗೆ ವ್ಯಾಯಾಮ ಕೊಡಲು ಬರುವವರು - ಇರುತ್ತಾರೆ. ಪ್ರೇಮಿಗಳ ಕಾಟ ಇಲ್ಲಿ ಕಡಿಮೆ. ಈ ಆಟದ ಬಯಲು ಒಂದು ಒಳ್ಳೆಯ ಸ್ಥಳ - ಹೆಚ್ಚು ವಾಹನ ಸಂಚಾರವೂ ಇಲ್ಲ.

ಈಗ ನಿಮ್ಮ ಭೂಭಾರ ಕಡಿಮೆ ಮಾಡಬಲ್ಲ ಕಾರ್ಯಕ್ರಮದ ಕುರಿತು ಸ್ವಲ್ಪ ವಿವರಣೆ.

ನಾನು ಸಂಗ್ರಹಿಸಿದ ನೂರು ಜನರನ್ನು ನಿಮಗೆ ಅನುಕೂಲವಾಗುವಂತೆ, ಒಂದು ದಿನ, ಆಟದ ಮೈದಾನಿನಲ್ಲಿ ಕೂಡಿಸುತ್ತೇನೆ. ನೀವು ಬೇಕಾದರೆ, ಅಲ್ಲಿಯೇ ಬದಿಯಲ್ಲಿ ನಿಂತು, ನನ್ನ ಏರ್ಪಾಡುಗಳನ್ನು ಕಾಣಬಹುದು. ಕೂಡಿ ಹಾಕುವ ಮೊದಲು ಅವರಿಗೆಲ್ಲ ಊಟತಿಂಡಿ ಕೊಡುವ ಏರ್ಪಾಡು ಮಾಡುತ್ತೇನೆ. ಹಲವಾರು ಧಾರ್ಮಿಕ ಸಂಸ್ಥೆಗಳು, ಸಿನೇಮಾ ತಾರೆಯರಿಂದ ಉದ್ಘಾಟನೆಗೊಂಡವುಗಳು, ಇವರಿಗೆಲ್ಲ ಧರ್ಮಾರ್ಥ ಊಟೋಪಚಾರ ಮಾಡಲು ಒಪ್ಪಿಕೊಂಡಿವೆ. ಆ ಸಂಸ್ಥೆಗಳಿಗೂ ಪುಣ್ಯ ಕಟ್ಟಿಕೊಳ್ಳಬೇಕೆಂದು ಮನಸ್ಸಾಗಿದೆ - ಹಾಗಾಗಿ ಬರಿ ಹೊಟ್ಟೆಯಲ್ಲಿ ಯಾರೂ ಸಾಯಬಾರದು ಎಂದು ಅವುಗಳ ಆಕಾಂಕ್ಷೆ.

ನಿಮಗೆ ಗುಂಪಿನ ಮೇಲೆ ಗುಂಡು ಹಾರಿಸಿಯೇ ಅಭ್ಯಾಸ ಇರುವುದರಿಂದ, ನಾನು ನೂರು ಜನರ ಗುಂಪನ್ನೇ ನಿಮ್ಮೆದುರಿಗೆ ಇರಿಸಬೇಕೇ ಅಥವಾ ಅವರು ಸಾಲಾಗಿ ನಿಲ್ಲಬೇಕೆ-ಎಂಬುದು ನನಗೆ ತಿಳಿಯುತ್ತಿಲ್ಲ. ಗುಂಪಿನ ಮೇಲೆ ಧಾಳಿ ಮಾಡಿದರೆ ಕೆಲವರಾದರೂ ಜೀವಂತ ಉಳಿದಾರು. ಹಾಗೆ ಉಳಿದವರು ನನ್ನ ಮೇಲೆ ಕೋರ್ಟು ಕೇಸನ್ನೂ ಹಾಕಬಹುದು. (ನೀನು ನನ್ನನ್ನು ಖಂಡಿತವಾಗಿಯೂ ಸ್ವರ್ಗಕ್ಕೆ ಕಳುಹಿಸುತ್ತಿ ಎಂದು ಆಶ್ವಾಸನೆ ಕೊಟ್ಟಿರುತ್ತಿ-ಅದನ್ನು ನಿನ್ನಿಂದ ನೆರವೇರಿಸಲು ಸಾಧ್ಯವಾಗಲಿಲ್ಲ-ಹಾಗಾಗಿ ನಮಗೆ ತಲಾ ಒಂದು ಲಕ್ಷ ರೂಪಾಯಿ ಪರಿಹಾರ ಧನವನ್ನು ಕೊಡಬೇಕು-ಎಂದು ಆ ಕೇಸು ಇದ್ದೀತು). ಇದರಿಂದ ನಿಮಗೂ

ಅವಮಾನ; ನೂರು ಜನರನ್ನು ಕೊಲ್ಲಲೇಬೇಕು ಎಂದು ನಿಮ್ಮ ದೃಢ ನಿರ್ಧಾರ ತಿಳುವಾಗಿ ಹೋಗಿ ಬಿಟ್ಟೀತು. ಇದೇ ಕಾರಣಕ್ಕಾಗಿ, ನಾನು ಈ ನೂರು ಜನರನ್ನು ಸಾಲಾಗಿ ನಿಲ್ಲಿಸುತ್ತೇನೆ. ನೀವು ಇವರ ಎದೆಗಳಿಗೆ ಸಾಲಾಗಿ ಗುಂಡು ಹಾರಿಸಬಹುದು. ಇದರಿಂದ ಬುಲೆಟ್‌ಗಳು ಹಾಳಾಗುವುದಿಲ್ಲ. ಪ್ರತಿಯೊಬ್ಬನಿಗೂ, ಅವನಿಗೆ ಎದೆ ಇರುವುದೆಂದಾದರೆ, ಗುಂಡು ತಾಗುತ್ತದೆ. ಅವನ ಬಾಯಿಯಿಂದ ದೇವರ ನಾಮ ಬರುವುದರ ಮೊದಲೇ, ಅವ ದೇವಲೋಕದಲ್ಲಿ ಅಪ್ಸರೆಯರ ನರ್ತನ ನೋಡುತ್ತಾ ಇರುತ್ತಾನೆ.

ಇಷ್ಟು ಜನರ ಸ್ವರ್ಗಾರೋಹಣ ಆದ ಬಳಿಕ, ನಿಮ್ಮ ಹೊಟ್ಟೆಗೆ ಕಟ್ಟಿಕೊಂಡಿರುವ ಬಾಂಬನ್ನು ಸಿಡಿಸಿ, ನೀವೂ ಅವರೊಡನೆ ಸೇರಲೂ ಬಹುದು ಅಥವಾ ನಿಮ್ಮಲ್ಲಿರುವ ಆಯುಧವನ್ನು ಬಿಸಾಡಿ, ಹತ್ತಿರದ ಪಾರ್ಕಿಗೆ ಓಡಿಹೋಗಿ, ಅಲ್ಲಿರುವ ಸಿಮೆಂಟು ಬೆಂಚುಗಳ ಮೇಲೆ ಕುಳಿತು, ತಂಪು ಗಾಳಿಯನ್ನು ಸೇವಿಸುತ್ತಾ, ಹಲ್ಲಿಲ್ಲದವರನ್ನು ನೋಡುತ್ತಾ, ಸಮಯ ಕಳೆಯಬಹುದು.

ಒಮ್ಮೆಲೇ ನೂರು ಜನರನ್ನು ಕೊಂದು ಭೂಭಾರವನ್ನು ಕಡಿಮೆ ಮಾಡಬಲ್ಲ ಒಂದು ಸಂದರ್ಭ ನಿಮ್ಮೆದುರಿಗೆ ಇರುವಾಗ, ನೀವಿದನ್ನು ಕಳೆದುಕೊಳ್ಳಬಾರದು-ಎಂದು ನಾನು ಈ ದೇಶದ ಹೆಂಗಸರ ಮಕ್ಕಳ ಪರವಾಗಿ ಕೇಳಿಕೊಳ್ಳುತ್ತೇನೆ.

ದೇಶದ ಮೂಲೆಮೂಲೆಗಳಲ್ಲಿ ಈ ರೀತಿಯ ಸ್ವರ್ಗಾರೋಹಣ ಯಜ್ಞ ನಡೆಯುವುದರಿಂದ ನಮ್ಮ ದೇಶದ ಧಾರ್ಮಿಕ ಸಂಪತ್ತುಗಳೊಳಗೆ ಹೊಂದಾಣಿಕೆ ಸಾಧ್ಯವಾಗಬಹುದೇನೋ.

ಒಂದು ವೇಳೆ ನನ್ನ ಈ ಸೂಚನೆ, ಅಪ್ಪಿತಪ್ಪಿ ರಾಜಕಾರಣಿಗಳಿಂದ ಬಂದು, ಅದರಲ್ಲಿ ಸಾವಿರ ಜನರು ತಾವೂ ದೇಶಕ್ಕಾಗಿ ಜೀವ ಬಿಡಲೂ ಸಿದ್ಧ ಎಂದು ಅವರವರ ರಕ್ತದಲ್ಲಿ ಬರೆದು ಕೊಟ್ಟರೂ, ಅವರ ಮಾತನ್ನು ನಂಬಬೇಡಿ. ಒಬ್ಬ ಸಾಮಾನ್ಯ ಪ್ರಜೆಯ ಜೀವಕ್ಕೆ ಸಾವಿರ ರಾಜಕಾರಣಿಗಳ ಜೀವದ ಬೆಲೆ ಇದೆ - ಎಂಬುದು ನಿಮಗೆ ತಿಳಿದಿರಲಾರದು. ಹಾಗಾಗಿ ರಾಜಕಾರಣಿಗಳನ್ನು ದಯವಿಟ್ಟು ಕೊಲ್ಲಬೇಡಿ. ಪಾಪದವರನ್ನು, ಬಡವರನ್ನು, ಹೆಂಗಸರು, ಮಕ್ಕಳನ್ನು ಧಾರಾಳವಾಗಿ ನಿಮ್ಮ ಬಂದೂಕಿನ ಗುರಿಯಾಗಿಸಿಕೊಳ್ಳಿ.

ಈ ಕಾರ್ಯಕ್ರಮದಲ್ಲಿ ಸಹಭಾಗಿಗಳಾಗಲು ನೀವು ಒಪ್ಪಿಕೊಂಡರೆ ಒಂದು ಕೆಸೆಟ್‌ನಲ್ಲಿ ನಿಮ್ಮ ಒಪ್ಪಿಗೆಯನ್ನು ಧ್ವನೀಕರಿಸಿ, ಬೆಂಗಳೂರಿನ ಯಾವ ಮಾರ್ಗದ ಮೇಲಾದರೂ ಇಟ್ಟುಬಿಡಿ.

ಇತಿ

ಭೂಭಾರ ಕಡಿಮೆ ಮಾಡುವ ಚಿಂತಕ

ಅಮೇರಿಕದಲ್ಲಿ ಆತ್ಮಾವಲೋಕನ

• ಕುಮುದಾ ಪುರುಷೋತ್ತಮ್

ನಾನು ಅಮೇರಿಕದಲ್ಲಿದ್ದಾಗ ಪತ್ರಿಕೆಯೊಂದರಲ್ಲಿ ವರದಿಯಾದ ಘಟನೆ ಹೀಗಿದೆ. ಶಾಲೆಯ ಉಪಾಧ್ಯಾಯಿನಿಯೊಬ್ಬಳು ತನ್ನ ಒಂದು ವರ್ಷದ ಮಗುವನ್ನು ಸೀಟ್ ಬೆಲ್ಟ್ ಹಾಕಿ ಕಾರಿನಲ್ಲಿ ಕೂರಿಸಿ ಶಾಲೆಯ ಮುಂದಿನ ಪಾರ್ಕಿಂಗ್‌ನಲ್ಲಿ ಬಿಟ್ಟು ತನ್ನ ಕರ್ತವ್ಯಪಾಲನೆಗೆ ಹೋಗಿದ್ದಳು. ಅಕಸ್ಮಾತ್ತಾಗಿ ಅಲ್ಲಿ ಬಂದ ಪಾರ್ಕಿಂಗ್ ವ್ಯವಸ್ಥಾಪಕ ಮೂರ್ಛೆ ಹೋಗಿದ್ದ ಮಗುವನ್ನು ಕಂಡು ಪೋಲಿಸ್, ಆಂಬ್ಯುಲೆನ್ಸಿಗೆ ತುರ್ತು ಕರೆ ನೀಡಿದ. ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿ ಮಗು ಅಸು ನೀಗಿತ್ತು. ತಾಯಿಯನ್ನು ಕರ್ತವ್ಯಲೋಪ ಮತ್ತು ಕೊಲೆಯ ಆಪಾದನೆ ಮೇಲೆ ಪೋಲಿಸರು ಬಂಧಿಸಿದರು. ಆಕೆ ನೀಡಿದ ಹೇಳಿಕೆ ಹೀಗಿತ್ತು. ಆಕೆ ಅವಿವಾಹಿತೆ. ಜೊತೆಗಿದ್ದ ಪ್ರಿಯಕರ ಆಕೆ ತಾಯಿಯಾಗುವ ಸೂಚನೆ ತೋರಿದಾಗ ಜವಾಬ್ದಾರಿ ಒಲ್ಲೆ ಎಂದು ತ್ಯಜಿಸಿದ. ಈಕೆ ಉದ್ಯೋಗ ಮಾಡಿ ಗಳಿಸುವುದು ಅನಿವಾರ್ಯವಾಗಿತ್ತು. ಈಕೆಯ ಹೆತ್ತವರು ವಿಚ್ಛೇದನ ಪಡೆದು ಬೇರೆ ವಿವಾಹವಾಗಿದ್ದರು. ಹೀಗಾಗಿ ಅವಳಿಗೆ ಕುಟುಂಬದ ಬೆಂಬಲ, ಸಹಾಯವಿರಲಿಲ್ಲ. ಮಗುವನ್ನು ಡೇಕೇರ್‌ನಲ್ಲಿ ಬಿಡಲು ಬಹಳ ಹಣ ವ್ಯಯವಾಗುವುದೆಂದು ಈ ಸುಲಭ ಮಾರ್ಗ ಕಂಡುಕೊಂಡಿದ್ದಳು.

ಮಗುವಿನ ದಾರುಣ ಸಾವು ಶೋಕಜನಿತ ನಿಜ. ಆ ಹೆಣ್ಣು ಮಗಳನ್ನು ಇಂತಹ ಅಸಹಾಯತೆಗೆ ತಳ್ಳುವ ಇಲ್ಲಿಯ ಕುಟುಂಬ ವ್ಯವಸ್ಥೆ ಭೀತಿ ತರುವಂತಹುದು. ಇದು ಇಲ್ಲಿಯ ಸಮಾಜದ ಒಂದು ಮುಖ.

ನಿಯತಕಾಲಿಕೆ ಒಂದರಲ್ಲಿ ಬಂದಿದ್ದ ಜಾಹಿರಾತು ಇದು. ಬೇಕಾಗಿದ್ದಾರೆ - ನಲ್ವತ್ತು ವರ್ಷದ ವಿವಾಹಿತ, ಎರಡು ಮಕ್ಕಳ ತಂದೆಗೆ ವಾರಾಂತ್ಯದ ರಜಾದಿನಗಳಲ್ಲಿ ಕಾಲಕಳೆಯಲು ಸುಂದರ, ಹುರುಪಿನ, ಮೋಜಿನ ಸ್ವಭಾವದ ಮಹಿಳೆ ಬೇಕಾಗಿದ್ದಾಳೆ. ಆಸಕ್ತರು ಸಂಪರ್ಕಿಸಿ ಎಂದು ಫೋನ್ ನಂಬರ್, ಇ-ಮೇಲ್ ಎಲ್ಲಾ ಇತ್ತು! ಈತನಿಗೆ ಯಾವುದೇ ಭಯ, ಸಂಕೋಚ, ಅಪರಾಧಿ ಭಾವ ಇದ್ದಂತಿರಲಿಲ್ಲ. ಎಲ್ಲವೂ ಮುಕ್ತ ಹಾಗೂ ಸ್ವಚ್ಛಂದ. ಇಂತಹುದು ಒಂದಲ್ಲ ಎರಡಲ್ಲ ಕಾಲಂಗಟ್ಟಲೆ ಜಾಹಿರಾತುಗಳು. ಎಷ್ಟೋ ನಡುವಯಸ್ಸಿನ ವಿವಾಹಿತ ಮಹಿಳೆಯರು ಕೂಡ ಪ್ರಿಯಕರನಿಗಾಗಿ ಕರೆ ನೀಡಿದ್ದರು.

ವಿವಾಹ ಪವಿತ್ರಬಂಧವಾಗದೆ ಬೇಕೆಂದಾಗ ಒಳಹೊಕ್ಕು ಹೊರಬರುವ ಒಪ್ಪಂದವಾದಾಗ ಇಂತಹ ಸಂಗತಿಗಳು ಸಾಮಾನ್ಯ ಎನಿಸಿತು. ಇದು ಇಲ್ಲಿಯ ಸಮಾಜದ ಮತ್ತೊಂದು ಮುಖ.

ಇಲ್ಲಿಯ ಟಿ.ವಿ.ಯಲ್ಲಿ ಬಿತ್ತರಗೊಳ್ಳುವ ಟಾಕ್‌ಷೋಗಳು ಬಹಳ ಆಸಕ್ತಿ ಕೆರಳಿಸುವಂತಹವು. ಹೆಚ್ಚಿನವು ಜ್ಞಾನ ಹೆಚ್ಚಿಸಿ ವೈಚಾರಿಕತೆ ಮೂಡಿಸುವಂತಹವಾದರೂ ಕೆಲವೊಂದು ಆತಂಕ ತರುವಂತಹವು. ಅವು ಯಾವುದೇ ಲಜ್ಜೆ, ಭಯ, ಸಂಕೋಚ, ಸಂಯಮವಿಲ್ಲದೆ ಮುಕ್ತವಾಗಿ ನಡೆಯುವ ಚರ್ಚೆಗಳು. ಅಂತಹ ಒಂದು ಷೋ 'ಪೆಟರ್ನಿಟಿ' ಅರ್ಥಾತ್ ಪಿತೃತ್ವದ ಬಗ್ಗೆ ನಡೆಯುವಂತಹುದು. ಅದರಲ್ಲಿ ಪಾಲ್ಗೊಳ್ಳುತ್ತಿದ್ದವರು ಸಾಮಾನ್ಯವಾಗಿ ಒಬ್ಬ ಹದಿಹರೆಯದ ಹುಡುಗಿ ಮತ್ತು ಆಕೆಯ ಬಾಯ್‌ಫ್ರೆಂಡುಗಳು. ಈ ಚರ್ಚೆಯ ಉದ್ದೇಶ ಆಕೆಯ ಮಗುವಿನ ತಂದೆ ಯಾರೆಂದು ನಿರ್ಧರಿಸುವುದು. ಮೊದಲು ಆಕೆ ತನ್ನ ಊಹೆಯಲ್ಲಿ ಮಗುವಿನ ತಂದೆ ಇಬ್ಬರಲ್ಲಿ ಯಾರೆಂದು ಹೇಳಿದರೆ ಆತ ತಾನಲ್ಲವೆಂದು ಮತ್ತೊಬ್ಬನ ಮೇಲೆ ಗೂಬೆ ಕೂರಿಸುವುದು. ಇದರ ಬಗ್ಗೆ ಕಾರ್ಯಕ್ರಮ ನಿರ್ವಾಹಕನೊಡನೆ ಮುಕ್ತವಾಗಿ ಚರ್ಚೆ ನಡೆದ ಮೇಲೆ ಈ ಮೊದಲೇ ಮಗುವಿನ ಹಾಗೂ ಇಬ್ಬರೂ ಬಾಯ್‌ಫ್ರೆಂಡಿನ ಡಿಎನ್‌ಎ ಪರೀಕ್ಷಿಸಿದ್ದು ಕಾರ್ಯಕ್ರಮದ ಕೊನೆಯ ಹಂತವಾಗಿ ಮಗುವಿನ ತಂದೆ ಯಾರೆಂಬ ಘೋಷಣೆಯೊಂದಿಗೆ ಕಾರ್ಯಕ್ರಮದ ಮುಕ್ತಾಯ. ನೆಮ್ಮದಿ ತರುವ ವಿಷಯವೆಂದರೆ ಇಂತಹ ಸಂಗತಿಗಳು ಅಲ್ಲೊಂದು ಇಲ್ಲೊಂದು ನಡೆಯುವಂತಹವು. ಆದಾಗ್ಯೂ ಯಾವುದೇ ಎಗ್ಗಿಲ್ಲದೆ ಇಂತಹ ಚರ್ಚೆಗಳು ಸಾರ್ವಜನಿಕ ವೇದಿಕೆಯಲ್ಲಿ ಮುಕ್ತವಾಗಿ ಚರ್ಚೆ ನಡೆಯುವುದು. ಇಲ್ಲಿ ಸೆನ್ಸರ್‌ಷಿಪ್‌ನ ಕಟ್ಟುಪಾಡು ಇಲ್ಲದಿರುವುದೇ ಕಾರಣವೆನಿಸುತ್ತದೆ.

''ಯಾರಿಗೆ ಯಾರುಂಟು, ಎರವಿನ ಸಂಸಾರ

ನೀರ ಮೇಲಣ ಗುಳ್ಳೆ ನಿಜವಲ್ಲ ಹರಿಯೆ''. ಇದು ದಾಸ ಸಾಹಿತ್ಯದ ಉಕ್ತಿ. ವೈರಾಗ್ಯದ ಉತ್ತುಂಗದಲ್ಲಿ ಹೊರಬಂದ ಮಾತುಗಳಿವು. ವೈರಾಗ್ಯಕ್ಕೆ ವಿರುದ್ಧವಾದ ಭೋಗಜೀವನಕ್ಕೆ ಒತ್ತು ಕೊಡುವ ಈ ಸಮಾಜದಲ್ಲೂ ಯಾರಿಗೆ ಯಾರೂ ಇಲ್ಲ. ಅವರವರ ಜೀವನಕ್ಕೆ, ಅವರವರು ತೆಗೆದುಕೊಂಡ ನಿರ್ಧಾರಕ್ಕೆ ಅವರವರೇ ಹೊಣೆ. ಮಾನವ ಸಂಬಂಧಗಳೂ ತೀರ ದುರ್ಬಲ. ಪ್ರೀತಿ, ವಿಶ್ವಾಸ ಕೇವಲ ಆಡಂಬರದ ಪ್ರದರ್ಶನ ವಸ್ತುವಾಗಿವೆಯೇ ಹೊರತು ಅದಕ್ಕೆ ಪೂರಕವಾದ ನಿಷ್ಠೆ, ಕರ್ತವ್ಯ, ಹೊಣೆಗಾರಿಕೆ ಕಾಣಸಿಗುವುದು ಅಪರೂಪ. ಇದರ ಪರಿಣಾಮ ಶಿಥಿಲಗೊಂಡಿರುವ ಕುಟುಂಬ ವ್ಯವಸ್ಥೆ, ರೊಚ್ಚಿಗೇಳುವ ಮಕ್ಕಳು, ಶಾಲಾ ಬಾಲಕರು ಸಹಪಾಠಿಗಳನ್ನು, ಶಿಕ್ಷಕರನ್ನು ಗುಂಡಿಕ್ಕಿ ಕೊಂದಿರುವ ಹಲವಾರು ಘಟನೆಗಳ ಬಗ್ಗೆ ಚಿಂತಿಸಿದಾಗ ಈ ಸಮಾಜ ಏನನ್ನೋ ಕಳೆದುಕೊಂಡಿದೆ ಎನಿಸುತ್ತದೆ.

ನಮ್ಮಲ್ಲಿ ಇಲ್ಲಿ ಕಾಣಸಿಗದ ಪ್ರಮಾಣದಲ್ಲಿ ನಿರುದ್ಯೋಗ, ದಾರಿದ್ರ್ಯ, ಅನಕ್ಷರತೆ, ಅಭಾವ ಪರಿಸ್ಥಿತಿ, ಅಶಿಸ್ತು ಇದೆ ನಿಜ. ಆದರೆ ಮಾನವ ಸಂಬಂಧದ ಎಳೆ ಗಟ್ಟಿಯಾಗಿದೆ. ಕುಟುಂಬ ವ್ಯವಸ್ಥೆ ಇನ್ನೂ ಭದ್ರವಾಗಿದೆ. ಐವತ್ತು ವರ್ಷದ ದಾಂಪತ್ಯದ ನಂತರವೂ ಇನ್ನೂ ಅಂಟಿಕೊಂಡಿರುವ ಅಜ್ಜ, ಅಜ್ಜಿ, ಸೊಸೆಗೆ

ಮುಚ್ಚಟೆಯಿಂದ ಬಾಣಂತನ ಮಾಡಿ ಮಗುವಿನ ಯೋಗಕ್ಷೇಮ ನೋಡುವ ಅತ್ತೆ, ಹಾಸಿಗೆ ಹಿಡಿದ ತಂದೆಯ ಆರೈಕೆ ಮಾಡುವ ಮಗ, ಖಾಯಿಲೆ ಬಿದ್ದಾಗ ಗಂಜಿ ಮಾಡಿ ತಂದುಕೊಡುವ ನೆರೆಮನೆಯಾಕೆ ನಮ್ಮ ಸಮಾಜದ ಶ್ರೀಮಂತಿಕೆಗೆ ಸಾಕ್ಷಿ. ನಗರೀಕರಣ ಇದನ್ನು ಹಾಳುಮಾಡದಂತೆ ನೋಡಿಕೊಳ್ಳುವುದು ನಮ್ಮ ಹೊಣೆ.

'ಥ್ಯಾಂಕ್ಸ್‌ಗಿವಿಂಗ್' ಮುಗಿಯುತ್ತಿದ್ದಂತೆ ಎಲ್ಲೆಲ್ಲೂ ಕ್ರಿಸ್‌ಮಸ್ ಹಬ್ಬದ ಸಂಭ್ರಮದ ನಿರೀಕ್ಷೆ ಆರಂಭ. ಇದರಲ್ಲೂ ಪ್ರಕೃತಿಯದೇ ಮೊದಲ ಹೆಜ್ಜೆ. ರಾತ್ರಿ ಮಲಗಿ ಬೆಳಿಗ್ಗೆ ಎದ್ದೊಡನೆ ಕಿಟಕಿಯ ಪರದೆ ಸರಿಸಿ ಹೊರನೋಡುವುದು ನನ್ನ ನಿತ್ಯದ ಪರಿಪಾಟ. ಅಂದು ಮಾತ್ರ ನಾನು ನೋಡುತ್ತಿರುವುದು ಕನಸೊ ನನಸೋ ಎಂದು ನನ್ನನ್ನೇ ಚಿವುಟಿಕೊಳ್ಳುವಂತಾಯ್ತು. ಹೊರಗಿನ ದೃಶ್ಯ ಸಂಪೂರ್ಣ ಮಾರ್ಪಾಡಾಗಿ ಯಾವುದೋ ಪಿಕ್ಚರ್ ಪೋಸ್ಟ್ ಕಾರ್ಡಿನ ದೃಶ್ಯದಂತಿತ್ತು. ಮನೆಗಳು, ಮರಗಳು, ಹುಲ್ಲುಹಾಸು, ರಸ್ತೆ, ಕಾಲುದಾರಿ ಎಲ್ಲದರ ಮೇಲೆ ಆರೇಳು ಇಂಚು ಹಿಮ ಬಿದ್ದು ಎಳೆ ಸೂರ್ಯನ ಬಿಸಿಲಿಗೆ ಹೊಳೆದು ಕಣ್ಣು ಕೋರೈಸುವಂತಿತ್ತು. ಯಾವುದೇ ಕ್ಷಣ ಉಡುಗೊರೆ ಚೀಲ ಹೆಗಲಿಗೇರಿಸಿ ಹಿಮಸಾರಂಗದ ಬಂಡಿಯನ್ನೇರಿ ಕ್ರಿಸ್‌ಮಸ್ ತಾತ ಬಂದು ಬಿಡುವನೋ ಎಂಬ ಭ್ರಮೆ ಮೂಡಿಸುವಂತಿತ್ತು. ಪ್ರಕೃತಿಯ ಜೊತೆಗೂಡಿ ನಾನೂ ಕ್ರಿಸ್‌ಮಸ್ ಹಬ್ಬ ಎದಿರ್ಗೊಳ್ಳಲು ಸಿದ್ಧಳಾದೆ.

ಸಡಗರದ ಮೊದಲ ಹೆಜ್ಜೆಯಾಗಿ ಎಲ್ಲಾ ಅಂಗಡಿಗಳಲ್ಲಿಯೂ ವಿವಿಧ ಪ್ರಮಾಣದ ನೂರಾರು ಪೈನ್ ಜಾತಿಗೆ ಸೇರಿದ ಕ್ರಿಸ್‌ಮಸ್ ಟ್ರೀಯ ಮಾರಾಟ. ಅದರ ಜೊತೆಗೆ ಅದನ್ನು ಸಿಂಗರಿಸಲು ಬೇಕಾಗುವ ಪುಟ್ಟ ಪುಟ್ಟ ನಕ್ಷತ್ರಗಳು, ಗಂಟೆಗಳು, ಬಣ್ಣಬಣ್ಣದ ವಿದ್ಯುದ್ದೀಪದ ಜೋಡಣೆ ಎಲ್ಲವೂ ಲಭ್ಯ. ಉಡುಗೊರೆ ಕೊಟ್ಟು ಸ್ವೀಕರಿಸುವುದು ಎಲ್ಲಾ ಹಬ್ಬಗಳ ಸಂಪ್ರದಾಯ ತಾನೇ. ಇದಕ್ಕಾಗಿ ಎಲ್ಲೆಲ್ಲೂ ಸಾಮಾನುಗಳ, ಬಟ್ಟೆಬರೆಗಳ ಇಳುವರಿ ಮಾರಾಟ, ಗಿರಾಕಿಗಳನ್ನು ಆಕರ್ಷಿಸಲು ಅಂಗಡಿಗಳಿಗೆ ವಿಶೇಷ ಅಲಂಕಾರದ ಶೋಭೆ. ನಾವು ವ್ಯಾಪಾರ ಮಾಡದಿದ್ದರೂ ಈ ಅಂಗಡಿಗಳ ವೈಭೋಗ ನೋಡುವುದೇ ಕಣ್ಣಿಗೊಂದು ಹಬ್ಬ.

ಕ್ರಿಸ್‌ಮಸ್ ಹಬ್ಬದ ಹಿಂದಿನ ರಾತ್ರಿ ಇಲ್ಲಿನವರೂ ನಮ್ಮ ಕ್ರೈಸ್ತಬಂಧುಗಳಂತೆ ನಡುರಾತ್ರೆ ಚರ್ಚಿಗೆ ತೆರಳಿ ಪ್ರಾರ್ಥನೆ ಸಲ್ಲಿಸುವರು. ಮರುದಿನ ದೀನದಲಿತರಿಗೆ ದಾನಧರ್ಮ ಮಾಡುವುದು ಹಬ್ಬದ ಆಚರಣೆಯ ಒಂದು ಅಂಗ. ಈ ದೇಶಕ್ಕೆ ಬಂದು ನೆಲಸಿರುವ ನಮ್ಮವರೂ ಅಷ್ಟೇ ಆಸಕ್ತಿಯಿಂದ ಕ್ರಿಸ್‌ಮಸ್ ಆಚರಿಸಿ ಕ್ರಿಸ್‌ಮಸ್ ಟ್ರೀ ಸಿಂಗರಿಸಿ ಪ್ರದರ್ಶಿಸುವುದು ಸ್ವಾರಸ್ಯಕರವಾಗಿತ್ತು. ''ಬಿ ಎ ರೋಮನ್ ಇನ್ ರೋಮ್'' ಎಷ್ಟು ಸಮಂಜಸ! ತಾಯ್ನಾಡಿನ ಸಂಸ್ಕೃತಿಯೊಡನೆ ಸೇರಿದ ನಾಡಿನ ಉತ್ತಮ ಆಚರಣೆಗಳನ್ನು ಮೇಳೈಸಿಕೊಂಡಿರುವುದು ಸರಿ ಎನಿಸಿತು.

ಚಳಿ, ಹಿಮಪಾತ ಹೆಚ್ಚುತ್ತಾ ಹೋದಂತೆ ನಮ್ಮೂರ ಬೆಚ್ಚನೆ ಹವೆ, ಚಿಕ್ಕಮಗಳೂರ ಕಾಫಿ, ಅವರೇಕಾಯಿ ಸೊಗಡಿಗೆ ಹಾತೊರೆಯುವಂತಾಗಿ ತಾಯ್ನಾಡಿಗೆ ಮರಳುವ ಸಿದ್ಧತೆ ನಡೆಸಿದೆವು. ಈ ನಾಡಿಗೆ ಬಂದಾಗ ಆದ ಪ್ರಯಾಣದ ಅನುಭವಕ್ಕೂ ಬಿಟ್ಟು ಹೊರಡುವಾಗಿನ ಅನುಭವಕ್ಕೂ ಸೆಪ್ಟೆಂಬರ್ ಹನ್ನೊಂದರ ಭಯೋತ್ಪಾದಕ ಘಟನೆ ಬಹಳ ವ್ಯತ್ಯಾಸ ತಂದಿತ್ತು. ಏರ್‌ಪೋರ್ಟಿನಲ್ಲಿ ಒಮ್ಮೆಯಲ್ಲ ನಾಲ್ಕಾರು ಬಾರಿ ಭದ್ರತಾ ತಪಾಸಣೆ ನಡೆಯಿತು. ವಿದೇಶಿ ಪಾಸ್‌ಪೋರ್ಟಿನವರು, ಚರ್ಮದ ಬಣ್ಣದಿಂದ ವಿದೇಶಿಗಳೆಂದು ಗುರ್ತಿಸಲ್ಪಟ್ಟವರು ಪ್ರತ್ಯೇಕ ಸಾಲಿನಲ್ಲಿ ನಿಂತು ಮತ್ತೊಮ್ಮೆ ಕೂಲಂಕುಶವಾಗಿ ತಪಾಸಣೆಗೆ ಒಳಪಡಬೇಕಾಯಿತು.

ನಮ್ಮ ಪೆಟ್ಟಿಗೆ, ಚೀಲಗಳನ್ನಲ್ಲದೆ ಪರ್ಸನ್ನೂ ಖಾಲಿ ಮಾಡಿ, ಕಾಲಿನ ಶ್ಯೂ ತೆಗೆದು ಕಾಲ್ಚೀಲವನ್ನು ತಡವಿ ಪರೀಕ್ಷಿಸಿದರು! ಇದು ಪಕ್ಷಪಾತ ಎನಿಸಿದರೂ ಈ ಕ್ರಮ ಎಲ್ಲರೂ ಸುರಕ್ಷತೆಗೇ ಎಂದು ವಿವೇಚನೆ ಬುದ್ಧಿ ಹೇಳಿತು.

ಇಷ್ಟೆಲ್ಲಾ ತಪಾಸಣೆಯಿಂದಾಗಿ ವಿಮಾನ ಮುಂಬೈಗೆ ಮೂರು ತಾಸು ತಡವಾಗಿ ಬಂದಿಳಿಯಿತು. ಪಾಸ್‌ಪೋರ್ಟ್ ನೀಡಿ ಅಧಿಕಾರಿಯ ಮುಂದೆ ನಿಂತಾಗ ಅದು ಕಾಲನ್ನು ಮೊದಲು ಕಚ್ಚಿದ್ದು. ನಂತರ ಕೈ, ಕೆನ್ನೆ, ಕತ್ತು ಎಲ್ಲೆಲ್ಲೂ. ನಾಲ್ಕು ತಿಂಗಳಿಂದ ಒಮ್ಮೆಯೂ ಕಚ್ಚಿಸಿಕೊಳ್ಳದ್ದಕ್ಕೆ ಸೇಡು ತೀರಿಸಿಕೊಳ್ಳುವಂತೆ ಸೊಳ್ಳೆಗಳು ಮುತ್ತಿ ರಕ್ತ ಹೀರಿದವು. ಅವುಗಳಿಂದ ತಪ್ಪಿಸಿಕೊಂಡು ಬೆಂಗಳೂರಿಗೆ ವಿಮಾನವೇರಿದಾಗ ಸೂರ್ಯನಾರಾಯಣ ತನ್ನ ದಿನದ ಪಯಣ ಆರಂಭಿಸಲಿದ್ದ. ಗಗನಸಖಿ ತಂದಿಟ್ಟ ಉಪಾಹಾರ ಮುಗಿಸಿದ ಬಾಯಿ ಬಿಸಿಬಿಸಿ ಕಾಫಿ ಬಯಸಿತು. ಆದರೆ ಅಂದು ಹಾಲಿನ ಸರಬರಾಜು ಇರಲಿಲ್ಲವಂತೆ! ಬಾಯಿ ಒಣಗಿಸಿಕೊಂಡು ಕಿಟಕಿಯಲ್ಲಿ ನೋಡುತ್ತಾ ಕುಳಿತೆ. ನೋಡನೋಡುತ್ತಿದ್ದಂತೆ ವಿಧಾನಸೌಧದ ಭವ್ಯತೆ, ಸುತ್ತುವರೆದ ಕಬ್ಬನ್‌ಪಾರ್ಕಿನ ಹಸಿರ ಸಿರಿ, ಮಹಾತ್ಮಾಗಾಂಧಿ ರಸ್ತೆಯ ವಾಹನಗಳ ಇರುವೆ ಸಾಲು - ಮೈಮನಸ್ಸು ಪುಳಕಗೊಂಡಿತು. ಒಂದೆರಡೇ ನಿಮಿಷಗಳಲ್ಲಿ ವಿಮಾನ ನೆಲ ಮುಟ್ಟಿ ವೇಗ ಕಳೆದುಕೊಂಡು ತಟಸ್ಥವಾಯಿತು.

ಲಗೇಜ್ ಪಡೆದು ಹೊರಬರುತ್ತಿದ್ದಂತೆ ಅಕ್ಷೀ... ಅಕ್ಷೀ .... ನನ್ನದೇ. ಒಮ್ಮೆಯಲ್ಲ ಹತ್ತಾರು ಬಾರಿ. ಸುಧಾರಿಸಿಕೊಳ್ಳುತ್ತಿದ್ದಂತೆ ಮತ್ತೊಂದು ಸುತ್ತಿನ ಅಕ್ಷೀ. ಕಣ್ಣು ಮೂಗಿನಲ್ಲಿ ದ್ರವೀಕರಣ. ಹೊರಗಿನ ಧೂಳು, ಹೊಗೆಗೆ ನನ್ನ ದೇಹಪ್ರಕೃತಿ ಕಪ್ಪ ಕಾಣಿಕೆ ನೀಡಿದ್ದ ಪರಿ ಇದು. ಯಜಮಾನರಾಗಲೇ ಟ್ಯಾಕ್ಸಿಯವರ ಬಳಿ ದರದ ಬಗ್ಗೆ ವಾಗ್ವಾದ ನಡೆಸಿದ್ದರು.

ಯಾವುದೂ ಬದಲಾಗಿರಲಿಲ್ಲ. ಎಲ್ಲವೂ ಇದ್ದಂತೆಯೇ ಇತ್ತು. ಮನಸ್ಸು ನಮ್ಮೂರೇ ಅಂದ, ನಮ್ಮೂರೇ ಚಂದ ಎಂದು ಹಾಡಿತು.

ಎಲ್ಲಾ ಒಂದೇ

• ಇಂದಿರಾಮೂರ್ತಿ

''ಸಾಯಂಕಾಲ ಆಫೀಸಿಂದ ಬರುವಾಗ ಹಣ್ಣು ತರಕಾರಿ ತಂದರೆ ತುಂಬಾ ಫ್ರೆಷ್ ಆಗಿರುತ್ತೆ. ರಾತ್ರಿ ಹೋದರೆ ಉಳಿದಿದ್ದೇ ಸಿಗುತ್ತೆ.''

''ಏನಿಲ್ಲ. ಎಲ್ಲಾ ಒಂದೇ.''

''ಬೇಲೂರ್ ಮೀಟ್'ಗೆ ಸುಬ್ಬಮ್ಮನ ಅಂಗಡಿಯಿಂದಲೇ ತಿಂಡಿ ಯಾಕೆ ತರಬಾರದು? ಆಮೇಲೆ ಅಂತ ಕೂತರೆ ಪಕ್ಕದ ಬೇಕರೀನೇ ಗತಿ.''

''ಏನೀಗ? ಎಲ್ಲಾ ಒಂದೇ.''

''ಬೇಳೆ, ಹುಳಿ, ಮೆಣಸಿನ ಪುಡಿ, ಟೊಮ್ಯಾಟೋ ಎಲ್ಲಾ ಕುಕ್ಕರಿನಲ್ಲಿ ಹಾಕಿದರೆ ಸಾರಿನ ವಾಸನೆ ಪೂರಾ ಹೋಗೇ ಬಿಡುತ್ತೆ. ರಿಟೈರ್ ಆದ ಮೇಲಾದರೂ ನಿಧಾನವಾಗಿ ನಮ್ಮ ಅಮ್ಮಂದಿರ ಮೆಥೆಡ್‌ನಲ್ಲಿ ಬೇರೆಯಾಗಿ ಕುದಿಸೋಣ.''

''ಹಾಗೇನಿಲ್ಲ, ಎಲ್ಲಾ ಒಂದೇ.''

''ಹೆಚ್ಡಿಎಫ್‌ಸಿ ಬ್ಯಾಂಕ್ ಇಲ್ಲೇ ಬಂತಲ್ಲಾ. ಕೊ ಆಪರೇಟಿವ್ ಬ್ಯಾಂಕ್ ಆಕೌಂಟ್ ಕ್ಲೋಸ್ ಮಾಡಿ ಅಲ್ಲೇ ಓಪನ್ ಮಾಡಿದರೆ ಏಟಿಮ್ ಸೌಕರ್ಯ ಸಿಗುತ್ತಲ್ಲವಾ?''

''-- ಎಲ್ಲಾ ಒಂದೇ.''

''ಎಲ್ಲಾ ಹೇಳ್ತಾರೆ ನಿತ್ಯಾನಂದ ಸ್ಟೋರ್ ಗೋಧಿಹಿಟ್ಟು, ಪ್ಯಾಕ್ ಆಗಿ ಬರುವ ಹಿಟ್ಟಿಗಿಂತ ಚೆನ್ನಾಗಿರುತ್ತೆ ಅಂತ. ಬರುವಾಗ ಆ ಕಡೆಯಿಂದಾನೇ ಬರೋಣವಾ?''

''-- ಎಲ್ಲಾ ಒಂದೇ.''

''ರೂಪಾ ಇಲ್ಲೇ ಕೆಲಸಕ್ಕೆ ಹೋಗ್ತಾಳಲ್ಲ. ಅವಳ ಮದುವೇಲಿ ದುಡ್ಡಿನ ಬದಲು ಒಂದು ಸಲ್ವಾರ್ ಕಮೀಝ್ ಕೊಡೋಣವಾ?''

''-- ಎಲ್ಲಾ ಒಂದೇ.''

''ನಾವು ಇದೇ ರೀತಿ ದೇವರು ದಿಂಡರು ಅಂತ ತಲೆ ಕೆಡಸ್ಕೊಳ್ಳದೇ ಇದ್ರೆ ಸ್ವರ್ಗ ಅಲ್ಲ ನರಕ ಗ್ಯಾರಂಟಿ.''

''-- ಎಲ್ಲಾ ಒಂದೇ.''

ಎಂದಿನಿಂದಲೂ ಕಿವಿಗೆ ಬೀಳ್ತಿದ್ದ ಈ 'ಎಲ್ಲಾ ಒಂದೇ' ಮಂತ್ರದ ಮಹಾತ್ಮೆ ಸರಿಯಾಗಿ ತಿಳಿದಿದ್ದು ನನಗೆ ಇತ್ತೀಚೆಗೆ. ಬ್ರಿಟಿಶ್ ಲೈಬ್ರರಿಯಿಂದ ತಂದ ಪರಮಾಣು

ಗಡಿಯಾರವ ಪುಸ್ತಕ ತಿರುವಿ ಹಾಕಿದಾಗ. ಹೆದರಬೇಡಿ. ಪರಮಾಣು ಶಕ್ತಿಗೂ ಪರಮಾಣು ಗಡಿಯಾರಕ್ಕೂ ಏನೇನೂ ಸಂಬಂಧ ಇಲ್ಲ. ಪರಮಾಣುಗಳನ್ನು ಛಿದ್ರಿಸಿ ಅವರಿಂದ ಶಕ್ತಿ ಪಡೆದಾಗ ಆಗುವ ವಿಕಿರಣ ಮಾಲಿನ್ಯದ ಫಜೀತಿ ಪರಮಾಣು ಗಡಿಯಾರಕ್ಕಿಲ್ಲ. ಪರಮಾಣು ಗಡಿಯಾರ ಚಿಂದಿಚಿಂದಿ ಮಾಡುವುದು ಸೆಕೆಂಡನ್ನು. ಅದೂ ತುಂಬಾ ಕ್ಲೀನಾಗಿ. ಹೀಗಾಗಿ ಪೊಲ್ಯೂಶನ್ ಪ್ರಾಬ್ಲಮ್ ಇಲ್ಲಿಲ್ಲವೇ ಇಲ್ಲ.

ಎಲ್ಲಾ ಒಂದೇ ಮಂತ್ರದ ಗೀಳು, ಅಜ್ಞಾನಿಗಳಿಗಲ್ಲ, ವಿಜ್ಞಾನಿಗಳಿಗೆ, ಪ್ರಾರಂಭವಾಗಿದ್ದು ಯಾವಾಗ ಒಂದು ಕ್ಷುಲ್ಲಕ ಸೆಕೆಂಡನ್ನು ನೂರು, ಸಾವಿರ, ಹತ್ತು ಸಾವಿರ, ಲಕ್ಷ, ದಶಲಕ್ಷ, ಹೀಗೆ ಚೂರುಚೂರು ಮಾಡುತ್ತಾ ಹೋಗಿ ಪರಮಾಣು ಗಡಿಯಾರದಿಂದ ಒಂದು ಸಾವಿರ ದಶಲಕ್ಷ ಭಾಗ (ಒಂದು ನ್ಯಾನೋ ಸೆಕೆಂಡ್) ಮಾಡಿ ಅತ್ಯಂತ ಖಚಿತವಾಗಿ ಅಳೆಯಲು ಸಾಧ್ಯವಾಯಿತೋ ಆಗಲೇ ನೋಡಿ.

ಸ್ವಾರಸ್ಯವೆಂದರೆ ನಮ್ಮ ತೂಕ, ಎತ್ತರ, ವಯಸ್ಸು 'ಎಲ್ಲಾ ಒಂದೇ' ಅಂದರೆ ಎಲ್ಲಕ್ಕೂ ಒಂದೇ ಮಾನದಂಡ ಸಾಕು ಅಂತ ಸಾಬೀತು ಮಾಡುವ ಗೀಳು ಅವರಿಗೆ ಆಗಲೇ ಹುಟ್ಟಿದ್ದು. ಈ ಆಧುನಿಕ ಯುಗ, ಮಾಹಿತಿ ತಂತ್ರಜ್ಞಾನ ಯುಗವೆನ್ನಿ, ಬಾಹ್ಯಾಕಾಶ ಯುಗವೆನ್ನಿ, ಕಲಿಯುಗ ಅಥವಾ ಸಾಧುಸಂತರ ಯುಗವೆನ್ನಿ (ಎಲ್ಲಾ ಒಂದೇ!) ಕಂಡಿರುವ ಹಲವಾರು ವಿಸ್ಮಯಗಳಲ್ಲಿ ಈ ಸಾಧ್ಯತೆಯೂ ಸೇರಿದೆ.

ಎಷ್ಟೋ ಬಾರಿ ವಿಜ್ಞಾನಿಗಳಿಗೆ ಪ್ರತಿ ಕ್ಷಣವೂ ಒಂದು ಯುಗದಂತೆ. ನಮಗೂ ಹೀಗೇ ತಾನೇ? ಒಂದು ಕ್ಷಣದಲ್ಲಿ ಬಂದೆ ಅಂತ ಹೋದವರು ಘಂಟೆಗಟ್ಟಲೆ ಬರದಿದ್ದಾಗ. ಹಾಗೂ ಪ್ರಿಯತಮ ಪ್ರೇಯಸಿಗಾಗಿ ಪಾರ್ಕಿನಲ್ಲಿ ಕಾಯುವಾಗ, ಒಲಿಂಪಿಕ್ ಓಟಗಾರ್ತಿಗೆ ಚಿನ್ನದ ಪದಕ ಕೈಜಾರಿ ಬದಲು ಬೆಳ್ಳಿಯ ಪದಕ ಸಿಕ್ಕಾಗ, ಕ್ರಿಕೆಟ್ ಬ್ಯಾಟ್ಸ್‌ಮನ್ ಮೂರನೆ ಅಂಪೈರ್ ತೀರ್ಮಾನಕ್ಕಾಗಿ ಉಸಿರು ಬಿಗಿ ಹಿಡಿದು ಕಾಯುವಾಗ, ಕ್ಷಣಕ್ಷಣವೂ ಯುಗಯುಗವೇ.

ಒಂದು ಕ್ಷಣ ಏನು ಮಹಾ ಒಂದು ನಿಮಿಷ, ಆದರೂ ಅಷ್ಟು ಕಾಲದ ಟಿವಿ ಜಾಹಿರಾತಿಗೆ ಸುರಿಯಬೇಕಾದ ಹಣ ಲಕ್ಷಾಂತರ ರೂಪಾಯಿಗಳು ಎಂದಾಗ ತಿಳಿದೀತು ಅದರ ಹೆಚ್ಚುಗಾರಿಕೆ.

ದಿನದಲ್ಲಿ 24 ಘಂಟೆಗಳು (25 ಯಾಕಿಲ್ಲ ಅಂತ ಕೇಳಬೇಡಿ. ಇದರ ಪ್ರಾರಂಭವಾಗಿದ್ದು ಈಜಿಪ್ಟ್‌ನಲ್ಲಿ, ಕಾರಣ ತಿಳಿದಿಲ್ಲ) ಘಂಟೆಗೆ ಅರವತ್ತು ನಿಮಿಷ, ನಿಮಿಷಕ್ಕೆ ಅರವತ್ತು ಸೆಕೆಂಡು, ಹೀಗಾಗಿ, ಸೆಕೆಂಡು ಕಾಲದ ಒಂದು ಪುಟ್ಟ ತುಣುಕು. ನಮ್ಮ ಹೃದಯ ಸೆಕೆಂಡಿಗೆ ಒಂದು ಬಾರಿಯಂತೆ ಬಡಿಯುತ್ತಲೇ ಇರಬೇಕು. ಕಣ್ಣು ಮಿಟುಕಿಸುವುದಕ್ಕೆ ನಮಗೆ ಬೇಕಾದ ಕಾಲ ಒಂದು ಸೆಕೆಂಡಿಗೂ ಕಡಿಮೆ. ಈ ಪುಟಾಣಿ ಸೆಕೆಂಡು ಯುಗವಾಗುವುದು, ನಾವೇನಾದರೂ ಬೆಳಕಿನ ವೇಗದಲ್ಲಿ ಓಡುತ್ತಿದ್ದರೆ.

ಆಗ ಒಂದೇ ಸೆಕೆಂಡಿನಲ್ಲಿ ನಾವು ಮುನ್ನೂರು ಸಾವಿರ ಕಿಲೋಮೀಟರ್ ದೂರ ಹೋಗಲು ಸಾಧ್ಯ!.

ಭೂಮಿಯಿಂದ ಬಾಹ್ಯಾಕಾಶ ನೌಕೆಗಳಿಗೆ ಹೋಗುವ ಸಂದೇಶಗಳು, ಕೃತಕ ಗ್ರಹಗಳ ಮೂಲಕ ಸಾಗುವ ದೂರವಾಣಿ ಕರೆಗಳು, ಅಂತರ್ಜಾಲ ಮೂಲಕ ಬರುವ ಹಲವಾರು ಮಾಹಿತಿಗಳು ಸಾಗುವುದು ಇದೇ ವೇಗದಲ್ಲಿ! ಕಾಲದ ಅಳತೆಯಿಲ್ಲಿ ಕೊಂಚ ಏರುಪೇರಾದರೆ ಬಾಹ್ಯಾಕಾಶ ನೌಕೆಗಳ ನಿಯಂತ್ರಣದಲ್ಲಿ ಭಾರಿ ಪ್ರಮಾಣದ ವ್ಯತ್ಯಾಸ ಉಂಟಾಗಿ ಅದು ದಾರಿ ತಪ್ಪಬಹುದು. ಇದೇ ರೀತಿ ಅಂತರ್ಜಾಲದ ಮಾಹಿತಿ ದಕ್ಷ ರೀತಿಯಲ್ಲಿ ಸಾಗದೆ ಅಸ್ತವ್ಯಸ್ತವಾಗಬಹುದು. ಸಂಪರ್ಕ ವ್ಯವಸ್ಥೆಯಲ್ಲೂ ಕಾಲದ ಅಪವ್ಯಯವಾಗದಂತೆ ಕಾಲದ ಅತ್ಯಂತ ಚಿಕ್ಕ ತುಣುಕನ್ನೂ ಖಚಿತವಾಗಿ ಅಳೆಯುವುದು ಅತ್ಯಗತ್ಯ. ಇದೂ ಅಲ್ಲದೆ ಪರಮಾಣು ಗಡಿಯಾರದಿಂದ ಮಾತ್ರ ಸಾಧ್ಯವಾದ ಇನ್ನೊಂದು ಅತ್ಯಂತ ಸ್ವಾರಸ್ಯಕರ ಸಾಧನವಿದೆ. ಇದೇ ಜಿಪಿಎಸ್ ರಿಸೀವರ್. ಇದೊಂದು ಕೈಗೆಟಕುವ (ಎರಡೂ ಅರ್ಥದಲ್ಲಿ) ಪುಟಾಣಿ ಸಾಧನ. ನೀವೆಲ್ಲೇ ಇರಿ, ನೀವಿರುವ ಜಾಗವನ್ನು ಇದು ಖಚಿತವಾಗಿ ಪತ್ತೆ ಹಚ್ಚಬಲ್ಲದು - ಆಕಾಶದಲ್ಲಿ, ಭೂಮಿ ಇಲ್ಲ ಸಮುದ್ರದ ಮೇಲೆ ಎಲ್ಲಿದ್ದರೂ ಸರಿ.

ಅಷ್ಟೇ ಅಲ್ಲ, ಪ್ರಯಾಣ ಮಾಡುವಾಗ, ನೀವಿರುವುದು ಇಲ್ಲಿ, ನೀವು ಹೋಗಬೇಕಾದ ಸ್ಥಳ ಇಷ್ಟು ದೂರ ಇದೆ, ಈ ವೇಗದಲ್ಲೇ ಹೋದರೆ ನೀವು ತಲುಪುವ ಸಮಯ ಇಷ್ಟು ಎಂದೆಲ್ಲಾ ನಿಮಗೆ ತಿಳಿಸಬಲ್ಲದು. ಇದು ಹೇಗೆ ಗೊತ್ತೇ? ಬಾಹ್ಯಾಕಾಶದಲ್ಲಿ ಸುತ್ತುತ್ತಿರುವ 24 ಗ್ಲೋಬಲ್ ಪೊಸಿಶನಿಂಗ್ ಸ್ಯಾಟಲೈಟ್‌ಗಳ ನೆರವಿನಿಂದ. ನೀವೆಲ್ಲೇ ಇರಿ, ನಿಮಗೆ ಇವುಗಳಲ್ಲಿನ 4 ಸ್ಯಾಟಲೈಟ್‌ಗಳು ಲಭ್ಯವಿದ್ದು ಅವುಗಳಿಂದ ಒಂದೇ ಸಮ ಕಾಲ ಮತ್ತು ಅವಿರುವ ಜಾಗದ ಬಗ್ಗೆ ಸಂದೇಶ ಬರುತ್ತಲೇ ಇದ್ದು ಇದರಿಂದ ನಿಮ್ಮಲ್ಲಿನ ರಿಸೀವರ್ ನೀವಿರುವ ಜಾಗ ಪತ್ತೆ ಹಚ್ಚುವುದು. ಈ ಸ್ಯಾಟಲೈಟ್‌ಗಳಲ್ಲಿರುವ ಪರಮಾಣು ಗಡಿಯಾರಗಳಿಂದ, ಅವುಗಳಿಂದ ಕರಾರುವಾಕ್ಕಾಗಿ ದೊರಕುವ ಕಾಲದ ಮಾಹಿತಿಯಿಂದಲೇ ಇದು ಸಾಧ್ಯ. ಆದರೆ ರಿಸೀವರ್‌ಗಳಲ್ಲಿ ಪರಮಾಣು ಗಡಿಯಾರ ಬೇಕಿಲ್ಲ. ಸೀಸಿಯಂ ಪರಮಾಣು ಗಡಿಯಾರ ಹೆಚ್ಚು ಬಳಕೆಯಲ್ಲಿದ್ದು ಇದು ಒಂದು ಸೆಕೆಂಡಿನ 9192631770ನೇ ಒಂದು ಭಾಗವನ್ನು ಸಂದೇಹವೇ ಇಲ್ಲದಂತೆ ಅಳೆಯಬಲ್ಲದು. ಈ ಸಂಖ್ಯೆಯೇ ಏಕೆ ಎಂದರೆ, ಸೀಸಿಯಂ ಪರಮಾಣುಗಳಲ್ಲಿ ಒಂದು ಸೆಕೆಂಡಿನಲ್ಲಿ ಇಷ್ಟು ಕಂಪನಗಳು ಕರಾರುವಾಕ್ಕಾಗಿ ಉಂಟಾಗುವಂತೆ ಮಾಡಲು ಸಾಧ್ಯ. ಒಂದೇ ರಾಗದ ಒಂದೇ ಸ್ವರ ಹೊರಡಿಸುವ ತಂಬೂರಿಯಂತೆ ಸೀಸಿಯಂ ಪರಮಾಣು ಹೊರಡಿಸುವ ಈ ಕಂಪನಗಳೇ ಸೀಸಿಯಂ ಗಡಿಯಾರದ 'ಟಿಕ್-ಟಿಕ್'ಗಳು. ಇದನ್ನು ಗಡಿಯಾರದಂತೆ ಉಪಯೋಗಿಸಲು ಬೇಕಾದ ತಂತ್ರಜ್ಞಾನ ಸಿಕ್ಕಿದ್ದು 1955ರಲ್ಲಿ, ಆಗಲೇ ಸೂರ್ಯನ

ಹುಟ್ಟು-ಮುಳುಗುವಿನಿಂದ ಸಿಗುವ ಸೆಕೆಂಡಿಗೆ ಪರಮಾಣು ಗಡಿಯಾರ ಖೋ ಕೊಟ್ಟಿದ್ದು.

ಸೂರ್ಯನ ಸೆಕೆಂಡು ವರ್ಷಪೂರ್ತಿ ಬದಲಾಗುತ್ತಿದ್ದು ಅದನ್ನು ಆಗಾಗ ರಿಪೇರಿ ಮಾಡಲೇಬೇಕು. ಪರಮಾಣು ಗಡಿಯಾರ ಹೀಗಲ್ಲ. ಅದೆಲ್ಲೇ ಇರಲಿ ಅದರ ಕಂಪನಗಳು ಬದಲಾಗುವುದೇ ಇಲ್ಲ. ಇಂದಿನ ಪರಮೋತ್ಕೃಷ್ಟ ಪರಮಾಣು ಗಡಿಯಾರ 300 ಲಕ್ಷ ವರ್ಷದಲ್ಲಿ ಒಂದು ಸೆಕೆಂಡ್ ವ್ಯತ್ಯಾಸ ತೋರಿಸಬಹುದು ಅಷ್ಟೇ,

ಸೆಕೆಂಡಿನಷ್ಟೇ ಸೂಕ್ಷ್ಮವಾಗಿ ದೂರ, ತೂಕ ಎರಡನ್ನೂ ಅಳೆಯಲು ಸಾಧ್ಯವಿಲ್ಲ ಎಂಬುದು ಬಹಳ ದಿನ ಭಾರಿ ತಲೆನೋವಿನ ವಿಷಯವಾಗಿತ್ತು -

ಆಗಲೇ ಶುರುವಾಗಿದ್ದು ನೋಡಿ 'ಎಲ್ಲಾ ಒಂದೇ' ಮಂತ್ರದ ಜಪ. ಈ ದಿನ ದೂರಕ್ಕೂ ತೂಕಕ್ಕೂ ಕಾಲದೊಂದಿಗೆ, ಇಲ್ಲಾ ಕಂಪನದೊಂದಿಗೆ ಬೆಸುಗೆ ಹಾಕಿ ಅವೆಲ್ಲಕ್ಕೂ ಒಂದು ಬಾದರಾಯಣ ಸಂಬಂಧ ಬೆಳೆಸುವುದರಲ್ಲಿ ವಿಜ್ಞಾನಿಗಳು ಯಶಸ್ವಿಯಾಗಿದ್ದಾರೆ.

ಒಂದು ಮೀಟರ್ ಉದ್ದ ಇಷ್ಟು, ಒಂದು ಕಿಲೋಗ್ರಾಂ ಇಷ್ಟು ಎಂದು ಸಂದೇಹವೇ ಇಲ್ಲದಂತೆ ಹಾಗೂ ಕಾಲಕಾಲಕ್ಕೆ ಬದಲಾಗದಂತೆ ನಿರೂಪಿಸಬೇಕು ತಾನೇ? ಪ್ಯಾರಿಸ್‌ನಲ್ಲಿ ಇದಕ್ಕಾಗಿಯೇ ಒಂದು ಲೋಹದ ಮಾದರಿ ಮೀಟರ್ ಪಟ್ಟಿ ಹಾಗೂ ಒಂದು ಕಿಲೋಗ್ರಾಮ್ ತೂಕದ ಲೋಹದ ಒಂದು ಮಾದರಿ ಸಿಲಿಂಡರ್ ಎರಡನ್ನೂ ಭದ್ರವಾಗಿ ಇಟ್ಟಿದ್ದಾರೆ. ಆದರೆ ಕಾಲ ಸರಿದಂತೆ ಇವುಗಳಲ್ಲಿ ಕೊಂಚ ಬದಲಾವಣೆ ಆಗುವುದು ಅನಿವಾರ್ಯವೇ ಆಗಿದೆ. ಅದೃಷ್ಟವಶಾತ್ ಎಲ್ಲಾ ಒಂದೇ - ಅದೇ ಕಂಪನ/ಕಾಲ' ಮಂತ್ರದಿಂದ ಸಿಗುವ ಮೀಟರ್ ಕೆಲೋರಿ ಹೀಗಿಲ್ಲ: ಅವು ಎಂದೆಂದೂ ಒಂದೆಯೇ.

ಈಗ ಒಂದು ಮೀಟರ್ ಎಂದರೆ, ಬೆಳಕು ಸೆಕೆಂಡಿನ 299 798 458ನೇ ಒಂದು ಭಾಗದಲ್ಲಿ ಕ್ರಮಿಸುವ ದೂರ. ಸೆಕೆಂಡಿನ ಖಚಿತತೆಯಿಂದ ಮೀಟರ್ ಈ ರೀತಿ ನಿಖರವಾಗಿ ನಿರ್ಧಾರವಾಗಿದೆ.


ಇನ್ನು ಕಿಲೋಗ್ರಾಂ. ಅದರಲ್ಲಿನ ಒಟ್ಟು ಶಕ್ತಿ ಎಷ್ಟೆಂದು ಐನ್‌ಸ್ಟೈನ್‌ರ ಅದ್ಭುತ ಸೂತ್ರವೊಂದರಿಂದ ತಿಳಿದಿದೆ. ನಾ. ಕಸ್ತೂರಿಯವರು ಅಶ್ವಶಕ್ತಿಯನ್ನು 'ಎರಡೂವರೆ ಸೇಖು ಹುರುಳಿ' ಎಂದು ಸರಳವಾಗಿ ಹೇಳಿದಂತೆ ಐನ್‌ಸ್ಟೈನ್‌ರು ಒಂದು ಕಿಲೋಗ್ರಾಂ ತೂಕ/ತೂಕ (ತೂಕದಲ್ಲಿನ ದ್ರವ್ಯರಾಶಿ ಎನ್ನುವುದು ಸೂಕ್ತ) ಅದರಲ್ಲಿನ ಚೈತನ್ಯ ಎರಡನ್ನೂ ಈ ರೀತಿ ವಿವರಿಸಿದ್ದಾರೆ.

ಈಗ E=mc2 E (ಚೈತನ್ಯ) = m (1 ಕಿಲೋಗ್ರಾಂ) x (ಬೆಳಕಿನ ವೇಗ) 2

ಒಂದು ಕಿಲೋಗ್ರಾಂ ಹೊಂದಿರುವ ಒಟ್ಟು ಚೈತನ್ಯವನ್ನು ಒಂದು ನಿರ್ದಿಷ್ಟ ಸಂಖ್ಯೆಯ ಬೆಳಕಿನ ಕಣಗಳು ಹೊಂದಿದ ಒಟ್ಟು ಚೈತನ್ಯ ಎಂದು ನಿರ್ಧರಿಸಲು ಸಾಧ್ಯ. ಬೆಳಕಿನ ಕಣಗಳ ಚೈತನ್ಯ ಅವುಗಳ ಕಂಪನದಲ್ಲಿದೆ.

ಒಂದು ಕಿಲೊಗ್ರಾಂ ಸಿಲಿಕಾನ್‌ನಲ್ಲಿ ಪರಮಾಣುಗಳ ಒಟ್ಟು ತೂಕವೆಂದೂ ಕಿಲೋಗ್ರಾಂ ಪ್ರಮಾಣವನ್ನು ನಿಖರವಾಗಿ ಗುರುತಿಸಲೂ ಸಾಧ್ಯ. ದೋಷರಹಿತ, ಪರಿಪೂರ್ಣ ಸಿಲಿಕಾನ್ ಹರಳುಗಳನ್ನು ತಯಾರಿಸಲು ಸಾಧ್ಯ ಎನ್ನುವುದೇ ಇದಕ್ಕೆ ಕಾರಣ. ಎಲೆಕ್ಟ್ರಾನಿಕ್ ರಂಗದ ಬೆನ್ನೆಲುಬೇ ಸಿಲಿಕಾನ್ ತಾನೇ? ಸಿಲಿಕಾನ್ ಪರಮಾಣುಗಳ ನಡುವಿನ ಅಂತರ, ಹರಳಿನ ಉದ್ದ, ಅಗಲ, ಎತ್ತರ ಎಲ್ಲವನ್ನೂ ನ್ಯಾನೋ ಸೆಕೆಂಡಿನಲ್ಲಿ ಬೆಳಕು ಸಾಗುವ ದೂರದ ಸೂಕ್ಷ್ಮತೆಯಿಂದ ಅಳೆಯುತ್ತಾರೆ ಎನ್ನುವುದನ್ನು ಗಮನಿಸಬೇಕು. ಹೀಗಾಗಿ ದೂರ, ತೂಕ ಹಾಗೂ ಇವುಗಳಿಂದಾಗುವ ಎಲ್ಲ ಅಳತೆಗಳನ್ನು ಕಾಲದಷ್ಟೇ ನಿಖರವಾಗಿ ನಿರ್ಧರಿಸಲು ಸಾಧ್ಯ ಎನ್ನುವುದು ಸಾಬೀತಾಗಿದೆ.

ಹೇಗಿದೆ ನೋಡಿ ''ಎಲ್ಲಾ ಒಂದೇ'' ಮಂತ್ರದ ಆಳ ಹಾಗೂ ವಿಸ್ತಾರ! ಜನರ ಭ್ರಷ್ಟ, ದುಷ್ಟ, ಶಿಷ್ಟ ಗುಣಗಳನ್ನೂ ಕರಾರುವಾಕ್ಕಾಗಿ ಇದೇ ಮಂತ್ರದಿಂದ ಅಳೆಯುವ ಸಾಧನವೊಂದು ದೊರಕಿ ನಮ್ಮ ಸಾಮಾಜಿಕ, ರಾಜಕೀಯ, ನ್ಯಾಯಾಂಗ, ಶಿಕ್ಷಣ ಮತ್ತಿತರ ವ್ಯವಸ್ಥೆಗಳನ್ನು ಸುಗಮಗೊಳಿಸಲಿ ಎಂದು ಆಶಿಸೋಣವೆ.



ಪ್ರೇಕ್ಷಕನೊಬ್ಬನ ಅನಿಸಿಕೆ :

ಹಾಸ್ಯೋತ್ಸವ - 2K2

ಕೊರವಂಜಿ-ಅಪರಂಜಿ ಟ್ರಸ್ಟ್ ಹಾಗೂ ಹಾಸ್ಯಬ್ರಹ್ಮ ಅರ್ಪಿಸಿದ 2002ರ ಹಾಸ್ಯೋತ್ಸವ ಈ ಸಲ ವೈಶಿಷ್ಟ್ಯಪೂರ್ಣವಾಗಿತ್ತು. ಯುವಪೀಳಿಗೆಯ ಹೊಸ ಮುಖಗಳ ಚುರುಕಿನ ಓಡಾಟ, ವೇದಿಕೆಯ ಸುತ್ತ-ಮುತ್ತ ಮತ್ತು ಅಕ್ಕಪಕ್ಕ ಹಾಗೂ ಎಲ್ಲೆಡೆಯೂ ಎದ್ದು ಕಾಣುತ್ತಿತ್ತು. ಚೀನಾದ "ಮುದಿ ಹುಲಿಗಳು" ಯುವ ಪೀಳಿಗೆಗೆ ರಾಷ್ಟ್ರದ ಅಧಿಕಾರ ಸೂತ್ರವನ್ನು ಸ್ವಯಂ ಪ್ರೇರಿತರಾಗಿ ಹಸ್ತಾಂತರಿಸಿದ ಘಟನೆಯನ್ನು ಇದು ನೆನಪಿಸಿತು. ನಿಜಕ್ಕೂ ಇದೊಂದು ವಿನೂತನ ದಿಟ್ಟ ಹೆಜ್ಜೆ. ಮಹಾನ್ ಭಾರತದ ರಾಜಕೀಯ ರಣಾಂಗಣದ ಮುದಿಗೊಡ್ಡುಗಳಿಗೆ ಇಂತಹ ದೂರದೃಷ್ಟಿ ಹೊಳೆಯುವುದು ಯಾವಾಗ? ಎಂದು ಪ್ರೇಕ್ಷಕರು ಅಲ್ಲಲ್ಲಿ ಮಾತನಾಡಿಕೊಳ್ಳುತ್ತಿದ್ದುದು ಕೇಳಿ ಬಂತು.

ಶಂಖ ಮತ್ತು ಪ್ರಶ್ನಾರ್ಥಕ ಹೊತ್ತ ರಂಗಸಜ್ಜಿಕೆ ಗಾಂಪರೊಡೆಯರ ಮೇಧಾವಿತನಕ್ಕೆ(?) ಕನ್ನಡಿ ಹಿಡಿದಿದ್ದರ ಜೊತೆಗೆ ಆಕರ್ಷಕ ಮತ್ತು ಅರ್ಥಪೂರ್ಣ. ಮಠದ ದ್ವಾರದ ಮೇಲೆ ಕಣಿಗೆಲೆ ಹೂವಿನ ಹಾರ ಮತ್ತು ಬೇವಿನ ಸೊಪ್ಪಿನ ತೋರಣ ಬಿಗಿದಿದ್ದರೆ ಗಾಂಪರ ಆತ್ಮಕ್ಕೆ ತಂಪೆರೆಯುತ್ತಿತ್ತಲ್ಲವೆ?

ಕಾಲಕ್ಕೆ ಸರಿಯಾಗಿ ಕಾರ್ಯಕ್ರಮ ಶುರು ಹೆಚ್ಚಿದ್ದು ಸೂರ್ಯೋದಯಕ್ಕೆ ಮುಂಚೆ ಟೆಂಟು ಹೂಡಿದ್ದ ಜನ ನಿಟ್ಟು-ಉಸಿರು ಬಿಡುವಂತಾಯಿತು. ಉತ್ಸವಮೂರ್ತಿಯ ಪಲ್ಲಕ್ಕಿ ಸೇವೆ, ಗಾಂಪರ ಪ್ರೆಸ್ ಕಾನ್ಫರೆನ್ಸ್, ಕಾರ್ಯಕ್ರಮ ಉದ್ಘಾಟಿಸಿದ ಶ್ರೀ ಎಸ್. ಷಡಕ್ಷರಿಯವರ ತಮ್ಮ ವೃತ್ತಿಜೀವನದ ಕೆಲವು ವಿನೋದಪೂರ್ಣ ಪ್ರಸಂಗಗಳು (ಹಾಸ್ಯಸಿಂಚನ), ಚಿತ್ರನಟ ಶ್ರೀ ಎಸ್. ಶಿವರಾಂರವರು ಉದಾಹರಿಸಿದ ದಾಶರಥಿ ದೀಕ್ಷಿತರ ಜೊತೆಗಿನ ಸುಮಧುರ ಸಂಬಂಧ, ಹಾಸ್ಯ ಉಕ್ಕಿಸುವ ನೆನಪುಗಳು, ನಾಗೇಂದ್ರಷಾ ತಂಡದವರ ರಾಜಕೀಯ ವಿಡಂಬನಾತ್ಮಕ ಸುಖ-ಸನ್ಮಾನ ಸಮಾರಂಭ ಪ್ರೇಕ್ಷಕರ ಮನಸ್ಸನ್ನು ಸೂರೆಗೊಂಡಿತು. ಹಾಸ್ಯ ಪುಸ್ತಕಗಳನ್ನು ಬಿಡುಗಡೆ ಮಾಡಿ, ಚಿಕ್ಕ-ಚೊಕ್ಕ ಭಾಷಣ ಮಾಡಿದ ಡಾ|| ಯು. ಆರ್. ಅನಂತಮೂರ್ತಿಯವರಿಂದ ಹಾಸ್ಯದ ಪ್ರಸಂಗವನ್ನು ನಿರೀಕ್ಷಿಸಿದ್ದವರಿಗೆ ಕೊಂಚ ಮಟ್ಟಿಗೆ ನಿರಾಶೆಯಾದದ್ದಂತೂ ಖರೆ.

ಕಾರ್ಯಕ್ರಮದ ಮಧ್ಯೆ ಮಧ್ಯೆ ಕಾಮೆಂಟ್ ಮಾಡಿ-ಮಾಡಿ ಮನಸ್ಸಿಗೆ ಮುದ ನೀಡುತ್ತಿದ್ದ ಆ.ರಾ. ಮಿತ್ರ ಮತ್ತು ಬೇಲೂರು ರಾಮಮೂರ್ತಿರವರ ನಡೆ-ನುಡಿಗಳು ಪ್ರೇಕ್ಷಕರಿಗೆ ಕಚಗುಳಿ ಇಡುತ್ತಿದ್ದವು. ಮಿತ್ರರು ಬುಳ್ಳನ ಬುರುಡೆ

ಉದುರಿಸಿದರಾದರೂ ಬಹುತೇಕ ಪ್ರೇಕ್ಷಕರ ಮುಖದಲ್ಲಿ ಅಷ್ಟಾಗಿ ನಗೆಮಿಂಚು ಹೊಳೆಯಲಿಲ್ಲ. ಮೊದಲ ಅವಧಿಯಲ್ಲಿ ಕಾಣಿಸಿಕೊಂಡ ನಾಟಕದ ತುಣುಕುಗಳಲ್ಲಿ ಅರ್ಧಕ್ಕರ್ಧ ನೀರಸ. ತಲಾ 10 ನಿಮಿಷಗಳ ಎರಡು ನಾಟಕದ ತುಣುಕುಗಳು, ಹಾಸ್ಯರಸ ಕವಿತೆ/ಗಾಯನ, ಮಿಮಿಕ್ರಿ/ಅಣಕು ಪ್ರದರ್ಶನ - ಈ ಮಾದರಿಯ ಕಾರ್ಯಕ್ರಮ ಜೋಡಿಸಿದ್ದರೆ ಸಮಾರಂಭಕ್ಕೆ ಮತ್ತಷ್ಟು ಕಳೆ ಏರುತ್ತಿತ್ತೇನೋ?

ಮಧ್ಯಾಹ್ನದ ಅವಧಿಯಲ್ಲಿ ಎಲ್ಲೇ ಆಗಲಿ ಸಾಮಾನ್ಯವಾಗಿ ಆಕಳಿಸುವವರ ತೂಕಡಿಸುವವರ ಮುಖಗಳನ್ನು ಕಾಣಬಹುದು. ಆದರೆ ಊಟದ ನಂತರ ಈ ಅವಧಿಯ ಚೇತೋಹಾರಿ; ಹಾಸ್ಯಗೀತೆಗಳನ್ನು ಹಾಡಿ ಮನರಂಜಿಸಿದ ಗುರುರಾಜ್ ತಂಡದವರ ಗಾಯನ, ನಗೆಚಾಟಿಕೆಯ ಚಿನಕುರುಳಿ ಮಾತುಗಳು ಪ್ರೇಕ್ಷಕರನ್ನು ಕುರ್ಚಿಗೆ ಅಂಟಿಕೊಂಡಿರುವಂತೆ ಮಾಡುವಲ್ಲಿ ಯಶಸ್ಸು ಕಂಡಿತು. ಉತ್ತರ ಕರ್ನಾಟಕದ ಗಂಡು ಭಾಷೆ, ಮಾತಿನ ಮೋಡಿ, ವೈವಿಧ್ಯಪೂರ್ಣ ಕುಣಿತ, ಮತ್ತಷ್ಟು ಕಾಲ ಇರಬಾರದೆ, ಅನಿಸಿತು.

'ಕಿವುಡರ ಮಾತು' ಎಂಬ ಲಘು ಪ್ರಹಸನ ಪ್ರಶಂಸನೀಯ. ಹಾಸ್ಯಾವಧಾನ ನಡೆಸಿಕೊಟ್ಟ ಮಾನ್ಯ ಗಣೇಶ್‌ರವರ ಗೀತ/ಕವಿತಾ ಗಾಯನದ ಪ್ರಶ್ನೋತ್ತರ ಸಂವಾದ ವಿದ್ವತ್ ಹಾಗೂ ಪ್ರತಿಭಾಪೂರ್ಣವಾಗಿದ್ದು ಸಭಿಕರ ಮನ ಸೆಳೆಯಿತು. ಚಮತ್ಕಾರಶೈಲಿಯೊಂದಿಗೆ ಹಾಸ್ಯರಸ ಹದವಾಗಿ ಬೆರೆತು, ಹಾಲು-ಜೇನುಗಳ 'Judicions Blend' ಅನ್ನು ಉಣಬಡಿಸಿತು. ಮಧ್ಯೆ-ಮಧ್ಯೆ ಮಿತ್ರರ ಕುಟುಕು ಮಾತುಗಳು ನಗೆಯ ಬುಗ್ಗೆಯನ್ನು ಸಿಂಪಡಿಸುತ್ತಿತ್ತು.

ಜಾತಕ ಪಕ್ಷಿಯಂತೆ ಕಾಯುತ್ತಿದ್ದ ಪ್ರೇಕ್ಷಕರಿಗೆ ಪ್ರೊ. ಎಂ. ಕೃಷ್ಣೇಗೌಡರು ಕಾಣಿಸಿಕೊಂಡಿದ್ದೇ ತಡ, ಇಡೀ ಸಭೆಯಲ್ಲಿ ಪಿನ್-ಡ್ರಾಪ್-ಸೈಲೆನ್ಸ್. ಅವರ ಸುಂದರ ನಗುಮುಖ, ಅರಳು ಹುರಿದಂತೆ ಮಾತು, ಜಾನಪದದ ಧಾಟಿ, ಸ್ಪಷ್ಟ ಉಚ್ಚಾರಣೆ, ಶ್ರೀಕಂಠ, ಮಾತಿನೊಂದಿಗೆ ಹಿತ-ಮಿತ ಅಭಿನಯ, ಪ್ರೇಕ್ಷಕರ ಮನಸ್ಸನ್ನು ಸಂಪೂರ್ಣ ಸೂರೆಗೊಂಡಿತು - ಇದು ಅಕ್ಷರಶಃ ನಿಜ, ವಿವಿಧ ಭಾಷೆ ಮತ್ತು ಸ್ವರಗಳ ಏರಿಳಿತ (Intonation) ಗಳೊಂದಿಗೆ ಅವರ ಕ್ರಿಕೆಟ್ ಕಾಮೆಂಟರಿ, ದಾವಣಗೆರೆ ಮಂದಿಯ ಮಾತಿನ ವೈಖರಿ, ಹಳ್ಳಿಯ ಹೆಂಗಳೆಯೊಬ್ಬಳು ವರ್ಣಿಸಿದ Film Story, ಶಕುನ ಶಾಸ್ತ್ರ ಹೇಳಿದ ಬುಡುಬುಡುಕೆಯವನ ಅನುಕರಣೆ - ಇವುಗಳನ್ನು ನೆರೆದಿದ್ದ ಜನಸಮೂಹ ಮತ್ತೆ ಮತ್ತೆ ಚಪ್ಪರಿಸುತ್ತಿತ್ತು. ಮಾತಿನ ಮೋಡಿಯ ಈ ಜಾದೂಗಾರ ಉಣಬಡಿಸಿದ 20 ನಿಮಿಷಗಳ ರಸದೂಟ ನಿಜಕ್ಕೂ Grand Feat. ಇಡೀ ಒಂದು ಅವಧಿಯನ್ನು ಇಂತಹವರಿಗೆ ಮೀಸಲಿಡಬಾರದೆ? ಎಂದು ಪ್ರೇಕ್ಷಕರು ಮುಕ್ತಕಂಠದಿಂದ ಆಡಿಕೊಳ್ಳುತ್ತಿದ್ದುದ್ದು ಶ್ರೀ ಕೃಷ್ಣೇಗೌಡರ

ಜನಪ್ರಿಯತೆಗೆ ಸಾಕ್ಷಿ. ಎಂತಲೇ ಶತಾವಧಾನಿ ಗಣೇಶ್ ರವರಿಂದ ಬಂದ Standing ovation ಎಂಬ ಸೂಚನೆಗೆ ಜನ ಎದ್ದು ಮೆಚ್ಚುಗೆ ಸೂಚಿಸಿದ್ದು ಅಭಿನಂದನೀಯ. ''ನಗೆಗಡಲಿನ ಪಯಣ'' ಇಷ್ಟು ಬೇಗ ಮುಗಿಯಿತೇ? ಎಂದು ಜನ ಮಾತಾಡಿಕೊಳ್ಳುತ್ತಿದ್ದುದು ಅವರಿಗೆ ಇನ್ನೂ ತೃಪ್ತಿಯಾಗಲಿಲ್ಲವೆಂದು ಭಾಸವಾಯಿತು. ಅನಂತರ ನಡೆದ ಗಾನವಿನೋದಿನಿ ತಂಡದ ಹಾಸ್ಯರಂಜನೆ ಕಾರ್ಯಕ್ರಮ ಮಕ್ಕಳಿಂದ ಹಿಡಿದು ಮುದುಕರೆಲ್ಲರ ಪ್ರಶಂಸೆಗೆ ಪಾತ್ರವಾದದ್ದು ಸಂತೋಷದಾಯಕ.

ಕಾರ್ಯಕ್ರಮದ ಮೊದಲಿನಿಂದ ಕೊನೆಯವರೆಗೂ ಕುಂಚದಲ್ಲಿ ಬಿಡಿಸಿದ ವ್ಯಕ್ತಿಚಿತ್ರಗಳು ಹವ್ಯಾಸಿ ಕಲಾವಿದ ಶೃಂಗೇರಿ ಸತೀಶ್ ಅವರ ಕಲಾ ನೈಪುಣ್ಯತೆಗೆ ಸಾಕ್ಷಿ. ಹಾಸ್ಯದೊಂದಿಗೆ ಕಲೆ ಮೇಳೈಸಿ ಕಣ್ಣಿಗೂ ಮುದ ನೀಡುತ್ತಿತ್ತು. ಹಾಸ್ಯೋತ್ಸವದಲ್ಲಿ ಚಿತ್ರ ಕಲಾವಿದರಿಗೂ ಅವಕಾಶ ಕಲ್ಪಿಸಿದ್ದು ಅಭಿನಂದನೀಯ. ಶ್ರೀ ಎಂ.ಪಿ. ಸುಬ್ರಮಣ್ಯಂರವರ ಕೈಚಳಕ ನಿಜಕ್ಕೂ ಹುಬ್ಬನ್ನೇರಿಸುವಂತಿತ್ತು.

ಕಾರ್ಯಕ್ರಮ ನಡೆಯುತ್ತಿದ್ದಾಗ, ಸ್ಥಳ ಸಾಲದೆ ಜನರ ನೂಕುನುಗ್ಗಲು ನಡೆದೇ ಇತ್ತು. ಕೆಲವೊಂದು ಸಲ ಕಾವೇರಿದ ಕಾವೇರಿ ವಿವಾದದಂತೆ ಸೀಟು ಗಿಟ್ಟಿಸಲು ಕೈ-ಕೈ ಮಿಲಾಯಿಸದಿದ್ದರೂ, ಬಿಸಿ-ಬಿಸಿ ವಾಗ್ವಾದ ನಡೆಯುತ್ತಿತ್ತು. ಸಮಾರಂಭದ ವ್ಯವಸ್ಥಾಪಕರೆಲ್ಲರೂ ಪದೇ ಪದೇ ವಿನಂತಿಸಿಕೊಂಡರೂ, ಪಟ್ಟಭದ್ರ ಹಿತಾಸಕ್ತಿಗಳವರು ಸೀಟುಗಳ ಮೇಲೆ ನಾನಾ ರೀತಿಯ ವಸ್ತುಗಳನ್ನು ಮಡಗಿ ''ಬರುತ್ತಾರೆ, ಬರುತ್ತಾರೆ'' ಎಂದು ಹೇಳುತ್ತಿದ್ದ ಎರಡು ಶಬ್ದಗಳ ಉತ್ತರ ಸೀಟು ಸಿಗದವರ ಕೂಗಾಟ-ಕಿರುಚಾಟಗಳಿಗೆ ಕಾರಣವಾಗಿತ್ತು. ಕಾಲೇಜು ಪರಿಸರದ ನೈರ್ಮಲ್ಯವನ್ನು ಕಾಪಾಡಲು ವ್ಯವಸ್ಥಾಪಕರು ಎಷ್ಟೇ ವಿನಂತಿಸಿದರೂ ಸಭಾಂಗಣದ ಒಳಗೂ-ಹೊರಗೂ ತಿಂದ ತಿಂಡಿಯ ತಟ್ಟೆ, ಪಾಲಿಥಿನ್ ಚೀಲ, ಲೋಟಗಳ ದೃಶ್ಯ, ಶಿಕ್ಷಿತ ನಾಗರಿಕರೆನಿಸಿಕೊಂಡವರ(?) ಪರಿಸರ ಸ್ವಚ್ಛತೆಯ ಪ್ರಜ್ಞೆಯನ್ನು ಪ್ರಶ್ನಿಸುವಂತಿತ್ತು. ಅಪವಾದವೋ ಎಂಬಂತೆ ಅಲ್ಲಿ-ಇಲ್ಲಿ ಕೆಲವರು ತಟ್ಟೆ, ಲೋಟ, ಕಾಗದದ ಚೀಲಗಳನ್ನು ತಮ್ಮ ಕೈಬ್ಯಾಗೊಳಗೆ ತುರುಕಿ ಕಾಲೇಜು ಆವರಣದ ಹೊರಗೆ ಒಯ್ದು ಕಸದ ತೊಟ್ಟಿಯಲ್ಲಿ ಹಾಕುತ್ತಿದ್ದ ದೃಶ್ಯ ಸಮಾಧಾನಕರ. ಪರಿಸರ ನೈರ್ಮಲ್ಯ ಎಲ್ಲರ ಹೊಣೆಯಲ್ಲವೇ? ನಮ್ಮ ಶಿಕ್ಷಿತ ಮಂದಿ ಇದನ್ನು ಎಂದು ಮನಗಂಡಾರು? ಜನ ಹೀಗೆ ನಡೆದುಕೊಂಡರೆ ಮುಂದಿನ ದಿನಗಳಲ್ಲಿ ಹಾಸ್ಯೋತ್ಸವ ಸಮಾರಂಭಗಳಿಗೆ ಸ್ಥಳಾವಕಾಶ ಸಿಗಬಲ್ಲುದೆ? ಇದು ಆಳವಾಗಿ ಯೋಚಿಸಬೇಕಾದ ಸಂಗತಿ.


ತಾವು ಕೇಳದಿದ್ದರೂ ಅನೇಕ ಸಂಘ-ಸಂಸ್ಥೆಗಳು ತಾವಾಗಿ ಮುಂದೆ ಬಂದು ಪ್ರಾಯೋಜಕರಾಗಿ ಸಹಕರಿಸಿದ್ದು, ಹಾಸ್ಯೋತ್ಸವದ ಜನಪ್ರಿಯತೆಗೆ ಮತ್ತೊಂದು


ನಿದರ್ಶನ. ''ದುಡಿದು ತಿನ್ನು'' ಎಂಬ ತತ್ವದಂತೆ, ಕಾಸು ಕೊಟ್ಟು ಅಗ್ಗದ ದರದಲ್ಲಿ ತಿಂಡಿ ತೀರ್ಥ ಕೊಳ್ಳಲು ಮಾಡಿದ ವ್ಯವಸ್ಥೆ ಅನುಕರಣೀಯ. ಪಕೋಡ ಪ್ರಿಯರೆಲ್ಲರಿಗೂ ಹಾಸ್ಯೋತ್ಸವದ ಅಂಗವಾಗಿ ಉಚಿತ ಪಕೋಡ ವಿತರಣೆ ಮಾಡಿಸಿದ್ದು, ಪಕೋಡಪ್ರಿಯ ದೇರಣ್ಣನ ಆತ್ಮಕ್ಕೆ ಶಾಂತಿ ಕೋರುವ ಅಪರೂಪದ ಸನ್ನಿವೇಶ. ಆದರೆ ಕಾಫಿ ತೆಗೆದುಕೊಂಡವರಿಗೆ ಮಾತ್ರ ಪಕೋಡ ಎಂದು ಹಂಚುತ್ತಿದ್ದವರು ಹೇಳುವುದನ್ನು ಕೇಳಿದಾಗ ವ್ಯಾಪಾರೀಬುದ್ಧಿಯ ಉದಾಹರಣೆ ನೆನಪಿಗೆ ಬರುತ್ತಿತ್ತು.

ಜನಪ್ರಿಯತೆಯೊಂದಿಗೆ ವರ್ಷೇ ವರ್ಷೇ ಹೆಚ್ಚುತ್ತಿರುವ ಹಾಸ್ಯಾಭಿಮಾನಿಗಳ ಸಾಂದ್ರತೆಯನ್ನು ತಡೆಗಟ್ಟಲು ಹಾಸ್ಯೋತ್ಸವ ಏರ್ಪಡಿಸುವವರು ಈಗಿನಿಂದಲೇ ಪರ್ಯಾಯ ವ್ಯವಸ್ಥೆ ಕುರಿತು ಯೋಚಿಸಿ-ಯೋಜಿಸುವುದು ಅಗತ್ಯವೆಂದು ಭಾವಿಸಿದರೆ ತಪ್ಪಿಲ್ಲವಷ್ಟೆ.

• ವೈ. ನಾರಾಯಣ ಶರ್ಮ

ಚಿಂತಾಮಣಿ




AMBUTHIRTHA
POWER PRIVATE LIMITED
2ND FLOOR 21/19, CRAIG PARK ROAD
M.G ROAD CROSS, BANGALORE-560 001 INDIA

Reg No CPMG/KA/BGW 544/2003-05

Printed by V.R. NATH for the Publisher KORAVANJI APARANJI TRUST. Published by KORAVANJI APARANJI TURST, 36, 6th Main Road, Malleswaram, Bangalore - 560 003
PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010
Editor : M. SHIVAKUMAR